ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಶನಿವಾರ 10ನೇ ಆಗಸ್ಟ್ 1996 ರಂದು

ಸದನವು, ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 9.50 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು:(ಶ್ರೀ ರಮೇಶ್ ಕುಮಾರ್)ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆ

1. ಆಲಮಟ್ಟಿ ಆಣೆಕಟ್ಟೆಯನ್ನು ಎತ್ತರಿಸುವ ಬಗ್ಗೆ ಮೂರು ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಇವೊತ್ತು ಆಂಧ್ರಪ್ರದೇಶದ ಬೆದರಿಕೆಗೆ ಓಗೊಟ್ಟು ಹೆದರಿ ಪ್ರಧಾನಿಯವರು ಮೂರು ರಾಜ್ಯಗಳ ಮುಖ್ಯಮಂತ್ರಿಗಳನ್ನು ತುರ್ತಾಗಿ ಕರೆದಿದ್ದಾರೆ. ನನ್ನ ವೈಯಕ್ತಿಕವಾದ ಅಭಿಪ್ರಾಯ, ನಮ್ಮ ಪಕ್ಷದ ಅಭಿಪ್ರಾಯ ಈ ಒಂದು ಸಭೆಗೆ ಕರ್ನಾಟಕದ ನಿಯೋಗ ಹೋಗಬಾರದಾಗಿತ್ತು. ಕರ್ನಾಟಕದ ನಿಯೋಗ ಹೋಗುವುದರಿಂದ ನಮಗೆ ಅದರಲ್ಲಿ ಅನಾಹುತ ಆಗುತ್ತಿದೆಯೇ ಹೊರತು ಒಳ್ಳೆಯದು ಏನೂ ಆಗತಕ್ಕಂಥ ಪ್ರಶ್ನೆ ಇಲ್ಲ. ಆಲಮಟ್ಟಿ ಆಣೆಕಟ್ಟೆಯನ್ನು ಎತ್ತರಿಸಬಾರದು ಎಂದು ಹೇಳಿ ಆಂಧ್ರದವರು ಒಂದೇ ಸಮನೆ ಬೆದರಿಕೆಯನ್ನು ಒಡ್ಡುತ್ತಿದ್ದಾರೆ, ತಂತ್ರಗಾರಿಕೆ ಹೂಡುತ್ತಿದ್ದಾರೆ, ಕೇಂದ್ರದ ಮೇಲೆ ಒತ್ತಡ ತರುತ್ತಿದ್ದಾರೆ. ಅಂತಿಮವಾಗಿ ಸಂಯುಕ್ತ ರಂಗ ಸರ್ಕಾರದಿಂದ ಹೊರಗಡೆ ಹೋಗಬೇಕಾಗುತ್ತದೆ ಎಂಬ ಬೆದರಿಕೆಯನ್ನು ಇವೊತ್ತು ಆಂಧ್ರದ ಮುಖ್ಯಮಂತ್ರಿಗಳು ನೀಡಿದ್ದಾರೆ. ಆ ಬೆದರಿಕೆಯ ತಂತ್ರಕ್ಕೆ ತರಾತುರಿಯಲ್ಲಿ ಇವೊತ್ತು ಪ್ರಧಾನಮಂತ್ರಿಗಳು ಸಭೆಯನ್ನು ಕರೆದಿದ್ದಾರೆ. ನನಗನಿಸುತ್ತದೆ ಕರ್ನಾಟಕ ನಿಲುವು ಸ್ಪಷ್ಟವಾಗಬೇಕು. ಇವೊತ್ತು ನಾವು ಒಂದು ನಿರ್ಧಾರಕ್ಕೆ ಬಂದಿದ್ದೇವೆ. ನಮ್ಮ ನೀರಾವರಿ ಸಚಿವರು ಮತ್ತು ಕರ್ನಾಟಕ ಮುಖ್ಯಮಂತ್ರಿಗಳಾದ ಶ್ರೀಮಾನ್ ಜೆ.ಎಚ್. ಪಟೇಲ್‌ರವರು ಯಾರು ಏನೇ ಹೇಳಿದರೂ ನಾವು ಜಲಾಶಯದ ಮಟ್ಟವನ್ನು ಏರಿಸುವುದರಲ್ಲಿ ಹಿಂದೆ ಬೀಳುವುದಿಲ್ಲ, ಏರಿಸಿಯೇ ಏರಿಸುತ್ತೇವೆ ಎನ್ನತಕ್ಕಂಥದ್ದನ್ನು ಉದ್ದಕ್ಕೂ ಹೇಳಿಕೊಂಡು ಬಂದಿದ್ದಾರೆ. ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಗಳಿಗೆ ಕೇಂದ್ರಸರ್ಕಾರ ಇನ್ನೊಂದು ಕೋಟಿ ರೂಪಾಯಿಗಳನ್ನು ನಮಗೆ ಕೊಡುತ್ತೇವೆ ಎಂದು ಹೇಳಿ ಭರವಸೆಯನ್ನು ಕೊಟ್ಟಿದ್ದಾರೆ, ಬಂದೆ ಬರುತ್ತದೆ ಎಂದು ಇಡೀ ರಾಜ್ಯಾದ್ಯಂತ ಹೇಳಿದ್ದಾರೆ. ಇವೊತ್ತು ನಮಗೆ ಗಂಭೀರವಾದ ಪರಿಸ್ಥಿತಿ ಕರ್ನಾಟಕದ ಜನತೆಗೆ ಇದೊಂದು ದಿಗಿಲು ಬಡಿದಂಥ ವಿಚಾರ ಆಗಿದೆ. ನಾವು ಇನ್ನೂರು ಕೋಟಿ ರೂಪಾಯಿಯನ್ನು ಕೊಡುವುದಕ್ಕೆ ಒಪ್ಪಿಲ್ಲ ಎಂದು ಕೇಂದ್ರಸರ್ಕಾರ ಇವೊತ್ತು ಸ್ಪಷ್ಟಪಡಿಸಿದೆ. ಅಂದಮೇಲೆ ಇನ್ನೂರು ಕೋಟಿ ರೂಪಾಯಿ ಕೊಡುತ್ತೇವೆ ಎಂದು ಹೇಳಿದಂಥ ಘೋಷಣೆ ಅದು ಬರೀ ರಾಜ್ಯದ ಜನತೆಗೆ ಮಾಡಿದಂಥ ಒಂದು ತಪ್ಪು ತಿಳುವಳಿಕೆ ಎಂದು ನಾನು ಅಂದುಕೊಂಡಿದ್ದೇನೆ.

ಅಧ್ಯಕ್ಷರು : ಇದು ಪ್ರಮುಖವಾದ ವಿಚಾರ, ಕೇಂದ್ರಸರ್ಕಾರದ ಬಜೆಟ್‌ಮಂಡನೆ ಮಾಡುವಾಗ ಒಂದು ಅಂಶ ಏನು ಪ್ರಸ್ತಾಪ ಮಾಡಿದ್ದಾರೆ ಎಂದರೆ ಒಂಭೈನೂರು ಕೋಟಿ ರೂಪಾಯಿ ಮೇಲೆ ಅಂದಾಜು ಇರತಕ್ಕಂಥ ಎಲ್ಲಾ ನೀರಾವರಿ ಪ್ರಾಜೆಕ್ಟನ್ನು ನ್ಯಾಷನಲ್ ಪ್ರಾಜೆಕ್ಟ್ಸ್ ಎಂದು ಟ್ರೀಟ್ ಮಾಡಿ ಅವುಗಳಿಗಾಗಿ ಇಷ್ಟು ಹಣವನ್ನು ಮೀಸಲಾಗಿಟ್ಟಿದ್ದೇವೆ ಎಂದು ಹೇಳಿದ್ದಾರೆ. ಒಂದು ಅಂದಾಜು ಇಡೀ ಭಾರತ ದೇಶದಲ್ಲಿ ಎಷ್ಟು ಪ್ರಾಜೆಕ್ಟ್ ಇದ್ದಾವೆ ಲೆಕ್ಕ ಹಾಕಿದರೆ ಅದರಲ್ಲಿ ಯು.ಕೆ.ಪಿ.ಯು ಒಂದು ಬರುತ್ತದೆ ನಮಗೆ ಇಷ್ಟು ಹಣ ಬರಬಹುದು ಎಂದು ಹೇಳಿದ್ದಾರಷ್ಟೆ, ಯು.ಕೆ.ಪಿ.ಗೆ ಹಣ ಎಂದು ಹೇಳಿ ಕೊಡುತ್ತಾ ಇಲ್ಲ, ಒಂಭೈನೂರು ಕೋಟಿಗೆ ಮೀರಿದ ಅಂದಾಜು ಇರತಕ್ಕಂಥ ಪ್ರಾಜೆಕ್ಟ್‌ಗೆ ಕೊಡುತ್ತಾ ಇರತಕ್ಕಂಥ ಹಣ ಆದ್ದರಿಂದ ಅದು ಕೇಂದ್ರ ಸರ್ಕಾರದ ಬಜೆಟ್‌ಗೆ ಸಂಬಂಧಿಸಿರುವುದರಿಂದ ನಾವೇಕೆ ಚರ್ಚೆಮಾಡೋಣ.?

ಶ್ರೀ ವಾಟಾಳ್ ನಾಗರಾಜ್ : ಅದರಲ್ಲಿ ಕೃಷ್ಣಾ ಒಂದು ಎನ್ನತಕ್ಕಂಥದ್ದನ್ನು ಹೇಳಿದ್ದಾರೆ ಅಂದಮೇಲೆ.

ಅಧ್ಯಕ್ಷರು : ಅದಕ್ಕೆ ನಾವು ಸಂತೋಷಪಡಬೇಕು, ಅಲ್ಲ ಬಜೆಟ್‌ನಲ್ಲೇ ಕಮಿಟ್ ಮಾಡಿ ಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಹಣ ಕೊಡುವುದರ ಬಗ್ಗೆ ನಾನು ಸಂತೋಷವನ್ನು ಪಡುವಂಥದ್ದು, ಅದರ ಬಗ್ಗೆ ನನ್ನ ತಕರಾರಿಲ್ಲ, ಈಗ ಆಂಧ್ರದವರು ತಕರಾರು ಏನು ತೆಗೆದಿದ್ದಾರೆ, ಆ ತಕರಾರಿನ ಬಗ್ಗೆ ಇವೊತ್ತು ತರಾತುರಿಯಲ್ಲಿ ನೀವು ಸಭೆಯನ್ನು ಕರೆಯತಕ್ಕಂಥ ಪ್ರಶ್ನೆ. ಬಗ್ಗೆ ಹೇಳುತ್ತಿದ್ದೇನೆ. ಅವರು ಕರೆಯಲಿ. ಅದು ಅವರಿಗೆ ಸೇರಿದ್ದು, ನನ್ನ ಅಭಿಪ್ರಾಯದಲ್ಲಿ ಸಭೆಯನ್ನು ಕರೆಯತಕ್ಕ ಪ್ರಶ್ನೆ ಇರಲಿಲ್ಲ, ಅದು ನನ್ನ ಒತ್ತಾಯ.

ನಿನ್ನೆ ಆಂಧ್ರಪ್ರದೇಶದ ಮುಖ್ಯಮಂತ್ರಿಯವರು ಕೊಟ್ಟಿರುವಂತಹ ಬೆದರಿಕೆಯ ಹಿನ್ನಲೆಯಲ್ಲಿ ನಾರು ಸಂಯುಕ್ತರಂಗದ ಹೊರಗಡೆ ಬರುತ್ತೇವೆನ್ನುವಂತಹ ಬೆದರಿಕೆಗೆ ಮಣಿದು ಸಭೆಯನ್ನು ಕರೆದಿದ್ದಾರೆ. ಸಂಯುಕ್ತ ರಂಗದ ಹಿತಕ್ಕೋಸ್ಕರ ಕರ್ನಾಟಕ ಬಲಿಯಾಗುವುದು ಬೇಡ. ನನ್ನ ಅತ್ಯಂತ ಪ್ರಾಮಾಣಿಕವಾದ ಪ್ರಯತ್ನ ಕಾವೇರಿ ಬಗ್ಗೆ ನೀವು ಅವರಿಗೆ ಹೇಳುತ್ತಿದ್ದೀರಿ. ಕೃಷ್ಣ ಬಗ್ಗೆಯೂ ಅದೇ ಹೇಳುತ್ತಿದ್ದೀರಿ. ಇದು ಆಗತಕ್ಕಂಥ ನೀತಿಯಲ್ಲಿ, ಅದುದರಿಂದ ನಮ್ಮ ನಿಯೋಗ ಹೋಗತಕ್ಕಂತ ಪ್ರಶ್ನೆಯೇ ಇಲ್ಲ, ಇಂದಿನ ನಮ್ಮ ನಿರ್ಧಾರಗಳು ಏನಿವೆ ಎಂದರೆ ಕೃಷ್ಣ ಬಗ್ಗೆ ಮಾತುಕತೆಯಾಗುವುದಾದರೆ ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಮಾತುಕತೆಯಾಗಬೇಕೆನ್ನುವಂಥಾದ್ದು ನಡೆದಿರುವಂತಹ ಸಂಪ್ರದಾಯವಾಗಿದೆ. ಹಿಂದೆ ಮಾನ್ಯ ವೀರೇಂದ್ರ ಪಾಟೀಲ್‌ರವರು ಮೈಸೂರಿನಲ್ಲಿ ಸಭೆ ಸೇರಿದ್ದರು, ಅದಾದ ನಂತರ ಶ್ರೀ ಶೈಲಂನಲ್ಲಿ ಮತ್ತು ತಿರುಪತಿಯಲ್ಲಿ ಸಭೆ ಸೇರಿದ್ದರು. ಆ ಬಗ್ಗೆ ತಕರಾರು ಇಲ್ಲ, ಆದರೆ ಈ ಸಭೆ ಬೇಕಾಗಿರಲಿಲ್ಲ, ಈ ಮೂರು ಜನ ಮುಖ್ಯಮಂತ್ರಿಗಳು ಸಭೆ ಸೇರಿ ತೀರ್ಮಾನಕ್ಕೆ ಬರಬೇಕಾಗಿತ್ತು. ಆದರೆ ಇವತ್ತು ಅದನ್ನು ಬಿಟ್ಟು ತಮ್ಮದೇ ಆದಂತಹ ನಿರ್ಧಾರಕ್ಕೆ ಬಂದು ಸಭೆಯನ್ನು ಕರೆದಿರುವಂಥಾದ್ದು ಸರಿಯಲ್ಲ.

ಇದು ಕೇವಲ ಕೇಂದ್ರದಲ್ಲಿ ಸರ್ಕಾರ ಉಳಿಯುವುದಕ್ಕೋಸ್ಕರವಾಗಿ ಕರ್ನಾಟಕವನ್ನು ಬಲಿ ಕೊಡುವಂಥಾದ್ದು ಕೃಷ್ಣವನ್ನಾಗಲಿ, ಕಾವೇರಿಯನ್ನಾಗಲಿ ಬಲಿ ಕೊಡುವಂತಹ ತಂತ್ರಕ್ಕೆ ಹೋಗುತ್ತಿರುವಂಥಾದ್ದು ಸರಿಯಲ್ಲ, ಈ ಸಭೆಗೆ ನಮ್ಮ ಸರ್ಕಾರದ ನಿಯೋಗ ಬೇಕಾಗಿತ್ತೇ ಎನ್ನುವಂಥಾದ್ದು ನನ್ನ ಪ್ರಶ್ನೆಯಾಗಿದೆ. ಆದರೆ ಈ ನಿಯೋಗ ಬಿ.ಜೆ.ಪಿ.

ಮುಖಂಡರ, ಕಾಂಗ್ರೆಸ್ ಮುಖಂಡರ ಮತ್ತು ಆಡಳಿತ ಪಕ್ಷದ ಮುಖಂಡರ ಈ ಮೂರು ಪಕ್ಷದ ಮುಖಂಡರುಗಳ ನಿಯೋಗವಾಗಿದೆ. ಅದು ನಮ್ಮದು ಅಲ್ಲ. ನಾವು ಯಾರೂ ಈ ನಿಯೋಗದಲ್ಲಿ ಹೋಗುವಂತಹ ಪ್ರಶ್ನೆ ಇಲ್ಲ. ನಾನು ಇವತ್ತು ತೀರ್ಮಾನ ಮಾಡಿದ್ದೇನೆ. ಇದನ್ನು ನಾನು ತಮ್ಮ ಎದುರಿಗೆ ಹೇಳುತ್ತಿದ್ದೇನೆ. ಈ ಕಾವೇರಿ ಮತ್ತು ಕೃಷ್ಣ ಬಗ್ಗೆ ರಾಜ್ಯದ ಜನರಿಗೆ ಇವರು ಮೋಸ ಮಾಡುತ್ತಿದ್ದಾರೆ ಆದ್ದರಿಂದ ಇವರು ಕರೆದಿರುವಂತಹ ಕಾವೇರಿಯ ಸಭೆಗಾಗಲಿ, ಕೃಷ್ಣ ಸಭೆಗಾಗಲಿ, ನಾನು ಹೋಗುವುದಿಲ್ಲವೆಂದು ಸ್ಪಷ್ಟಪಡಿಸಿದ್ದೇನೆ ಮತ್ತು ನಿರ್ಧಾರವನ್ನು ಮಾಡಿದ್ದೇನೆ. ಇವರಿಂದ ಈ ರಾಜ್ಯದ ರಕ್ಷಣೆಯಾಗುವುದಿಲ್ಲ, ಕಾವೇರಿ ರಕ್ಷಣೆಯಾಗುವುದಿಲ್ಲ, ಮತ್ತು ಕೃಷ್ಣ ರಕ್ಷಣೆಯಾಗುವುದಿಲ್ಲ. ಇವರ ಅಧಿಕಾರಕ್ಕೋಸ್ಕರ ಪಿತೂರಿ ನಡೆಯುತ್ತಿದೆ, ಈ ಪಿತೂರಿಗೆ ನಮ್ಮ ಪಕ್ಷ ಬೆಂಬಲವನ್ನು ಕೊಡುವುದಿಲ್ಲವೆನ್ನುವ ಮಾತನ್ನು ಸ್ಪಷ್ಟಪಡಿಸಿದ್ದೇನೆ. ಇದರ ಬಗ್ಗೆ ಎರಡು ಅಭಿಪ್ರಾಯವಿಲ್ಲ. ಇನ್ನು ಮುಂದೆ ಕರೆಯುವಂತ ಯಾವುದೇ ಸಭೆಗಳಿಗೆ ಮಾನ್ಯ ಮುಖ್ಯಮಂತ್ರಿಯವರು ಕರೆಯುವಂತಹ ಸಭೆಗಳಿಗೆ ಹೋಗುವುದಿಲ್ಲ, ಆದರ ಸಭೆಯ ಮುಂಗದೆ ಮಾತ್ರ ನಮ್ಮ ಪಕ್ಷ ಅವರ ಸಭೆಯನ್ನು ವಿರೋಧಿಸಿ ಪ್ರತಿಭಟನೆ ಮಾಡೇ ಮಾಡುತ್ತೇವೆನ್ನುವಂತಹ ಮಾತನ್ನು ಹೇಳುತ್ತೇನೆ. ಇವತ್ತು ಹೋಗಿರುವಂತಹ ನಿಯೋಗದಿಂದ ಕರ್ನಾಟಕಕ್ಕೆ ಅನ್ಯಾಯ ಮತ್ತು ಮೋಸವಾಗುತ್ತದೆ. ಈ ಸಂಯುಕ್ತರಂಗವನ್ನು ಉಳಿಸುವುದಕ್ಕೆ ಕರ್ನಾಟಕವನ್ನು ಬಲಿ ಕೊಡುವಂತಹ ಒಂದು ಪಿತೂರಿ, ತಂತ್ರವೆಂದು ಅದನ್ನು ವಿರೋಧಿಸುತ್ತೇನೆ, ಆಂಧ್ರಪ್ರದೇಶದ ಮುಖ್ಯಮಂತ್ರಿಯವರು ಒಡ್ಡಿರುವಂತಹ ಬೆದರಿಕೆ ಇದೆಯಲ್ಲಾ, ಅದನ್ನು ಕರ್ನಾಟಕ ಜನತೆ ಒಕ್ಕೊರಲಿನಿಂದ ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಮೊದಲು ಮಾತನಾಡಿ ಎಂದು ಹೇಳಿ ಈಗ ನನ್ನನ್ನು ಬಿಟ್ಟು ಹೊರಟು ಹೋಗುವುದೇ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದು ನಿಜಕ್ಕೂ ಅತ್ಯಂತ ಗಂಭೀರವಾದಂತಹ ವಿಷಯವಾಗಿದೆ. ನಾನು ತಮ್ಮ ಅನುಮತಿಯನ್ನು ಪಡೆದು ಪ್ರಸ್ತಾಪ ಮಾಡುತ್ತೇನೆ. ಇವತ್ತು ಮಾನ್ಯ ಪ್ರಧಾನ ಮಂತ್ರಿಯವರು ಆಲಮಟ್ಟಿ ಅಣೆಕಟ್ಟಿನ ಎತ್ತರದ ಹಿನ್ನೆಲೆಯಲ್ಲಿ ಮೂರು ರಾಜ್ಯಗಳ ಮುಖ್ಯಮಂತ್ರಿಗಳ ತುರ್ತು ಸಭೆಯನ್ನು ಕರೆದಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಯವರು ನನಗೂ ಸಹ ಬರಬೇಕೆಂದು ಪತ್ರ ಬರೆದಿದ್ದರು. ಆದರೆ ಭಾರತೀಯ ಜನತಾ ಪಕ್ಷ ತನ್ನ ನಿಲುವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿರುವುದರಿಂದ ಈಗಾಗಲೆ ಪ್ಲಾನಿಂಗ್ ಕಮಿಷನ್ ಕ್ಲಿಯರ್ ಮಾಡಿರುವಂತಹ ಬಚಾವತ್ ಆಯೋಗದ ತೀರ್ಪಿನ ಹಿನ್ನಲೆಯಲ್ಲಿ ಆಲಮಟ್ಟಿ ಎತ್ತರ 519 ಮೀಟರ್ ಏರಿಸುವುದಕ್ಕೆ ಅಡ್ಡಿ ಮಾಡುವುದಕ್ಕೆ ಆಗುವುದಿಲ್ಲ. ಅದು ಜನ್ಮಸಿದ್ಧ ಹಕ್ಕು, ಬಚಾವತ್ ಆಯೋಗದ ತೀರ್ಪಿನ ಪ್ರಕಾರ ನಮಗೆ ಬಂದಿರುವಂತಹ ಸಾರ್ವಭೌಮವಾದ ಅಧಿಕಾರ ನಮ್ಮದು ಇದೆ.

ತಾವು ಒಂದು ವಿಷಯವನ್ನು ಗಮನಿಸಬೇಕು. ಎಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿದೆ. ಆಲಮಟ್ಟಿ ವಿವಾದಕ್ಕೆ ಸಂಬಂಧಿಸಿದಂತೆ ಸಂಯುಕ್ತರಂಗಕ್ಕೆ ನೀಡಿರುವಂತಹ ಬೆಂಬಲವನ್ನು ಪುನರ್ ಪರಿಶೀಲಿಸಬೇಕಾದಿತ್ತು ಎಂದು ತೆಲುಗುದೇಶಂ ಬೆದರಿಕೆ ಹಾಕಿರುವಂತಹ ಹಿನ್ನಲೆಯಲ್ಲಿ ಕೃಷ್ಣ ನದಿ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ತುರ್ತು ಸಭೆಯನ್ನು ಮಾನ್ಯ ಪ್ರಧಾನಮಂತ್ರಿಯವರಾದ ದೇವೇಗೌಡರು ನಾಳೆ ಕರೆದಿದ್ದಾರೆ. ಇನ್ನೊಂದು ವಿಷಯ ಮುಖ್ಯವಾದದ್ದು ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸುವ ಕರ್ನಾಟಕದ ಕ್ರಮಕ್ಕೆ ಆಂಧ್ರಪ್ರದೇಶ ಸರ್ಕಾರ

ತೀವ್ರವಾಗಿ ವಿರೋಧ ವ್ಯಕ್ತಪಡಿಸಿದೆ. ಅಲ್ಲದೆ ಕರ್ನಾಟಕದ ಕೃಷ್ಣ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ 200 ಕೋಟಿ ರೂಪಾಯಿಗಳ ನೆರವನ್ನು ನೀಡಿದೆ ಎಂಬ ಹಿನ್ನಲೆಯಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಶ್ರೀ ಚಂದ್ರಬಾಬು ನಾಯ್ಡುರವರು ಈ ಬಗ್ಗೆ ತೀವ್ರವಾದ ಆಕ್ಷೇಪವನ್ನು ವ್ಯಕ್ತಪಡಿಸಿ ಪ್ರಧಾನಮಂತ್ರಿಯವರಿಗೆ ಪತ್ರ ಬರೆದಿದ್ದಾರೆ. ಈ ಹಿನ್ನಲೆಯಲ್ಲಿ ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಕರೆದಿದ್ದಾರೆ. ಇವತ್ತು ಈ ಒಂದು ರೀತಿಯಲ್ಲಿ ಪ್ರಧಾನಮಂತ್ರಿಯವರನ್ನು ಬ್ಲಾಕ್‌ಮೆಲ್ ಮಾಡುವಂತಹ ಒಂದು ವ್ಯವಸ್ಥಿತವಾದಂತಹ ಕುತಂತ್ರವನ್ನು ಆಂಧ್ರಪ್ರದೇಶದ ಸರ್ಕಾರ, ತಮಿಳುನಾಡು ಸರ್ಕಾರಗಳು ಮಾಡಿವೆ. ಮಾನ್ಯ ಪ್ರಧಾನಮಂತ್ರಿಯವರು ಇಡೀ ದೇಶಕ್ಕೆ ಪ್ರಧಾನಿಗಳಾಗಿರುತ್ತಾರೆ. ಅವರು ಪ್ರಧಾಮಂತ್ರಿಗಳಾಗಿ ಕಾನೂನು ಮೀರಿ ಕರ್ನಾಟಕ ರಾಜ್ಯಕ್ಕೆ ಯಾವುದೇ ನೆರವನ್ನು, ಯಾವುದೇ ಸಹಕಾರವನ್ನು ಕೊಡುವಂಥಾದ್ದು.

ನಾವು ನಿರೀಕ್ಷೆ ಮಾಡುವುದಿಲ್ಲ. ಅವರು ರಾಜ್ಯದ ಮುಖ್ಯಮಂತ್ರಿಗಳಾಗಿ ಇದ್ದುದ್ದರಿಂದ ಅವರಿಗೆ ಸಮಸ್ಯೆಗಳು ಗೊತ್ತಿರುವುದರಿಂದ ಅವರ ಕಾಲದಲ್ಲಿ ಹಿಂದೆ ಆಗಿರುವಂತಹ ಅಪರಾಧಗಳು, ತಪ್ಪುಗಳು, ಹಿಂದಿನ ಸರ್ಕಾರಗಳು ಏನು ಮಾಡಿಕೊಂಡು ಬಂದವೋ ಅದು ಆಗುವುದಿಲ್ಲವೆಂಬ ವಿಶ್ವಾಸ ಇಟ್ಟುಕೊಂಡಿದ್ದೆವು. ಮಾನ್ಯ ಪ್ರಧಾನ ಮಂತ್ರಿಯವರು ಮಾಡಿದ ಮೊದಲನೆಯ ತಪ್ಪು ಹೆಜ್ಜೆಯೆಂದರೆ ಯಾವಾಗ ಆಂಧ್ರಪ್ರದೇಶದವರು ಪ್ರಾರಂಭದಲ್ಲಿ ಕುಂಟು ನೆಪವನ್ನು ಮಾಡಿಕೊಂಡು ಕಾಲು ಕೆರೆದುಕೊಂಡು ಜಗಳವಾಡಲು ಪ್ರಾರಂಭಿಸಿದರೋ, ಅಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಎತ್ತರಿಸುವುದು ನಿಲ್ಲಿಸಬೇಕೆಂದು ಪ್ರಸ್ತಾಪ ಮಾಡಿದರೋ ಆಗ ಮಾನ್ಯ ಪ್ರಧಾನ ಮಂತ್ರಿಯವರು ಒಂದು ಮಾತನ್ನು ಹೇಳಿದರು. ಎರಡೂ ರಾಜ್ಯಗಳ ಅಧಿಕಾರಿಗಳನ್ನು ಕರೆದು ಮಾತನಾಡುತ್ತೇನೆಂದು ಹೇಳಿದರು. ಇದು ಎಲ್ಲಾ ಪತ್ರಿಕೆಗಳಲ್ಲೂ ಬಂತು. ನನಗೆ ಅರ್ಥವಾಗದೆ ಇರುವಂತಹ ಸಂಗತಿಯೆಂದರೆ ಪ್ರಧಾನಮಂತ್ರಿಯವರ ಪ್ರವೇಶ ಯಾವಾಗ ಆಗಬೇಕು? ನಾವು ಏನಾದರೂ ಬಚಾವತ್ ಆಯೋಗದ ತೀರ್ಪಿನ ವಿರುದ್ಧವಾಗಿ ಪ್ಲಾನಿಂಗ್ ಕಮೀಷನ್‌ನ ವಿರುದ್ಧವಾಗಿ ಯಾವುದೇ ಅನುಮತಿ ಇಲ್ಲದೆ, ಈ ಪ್ರಾಜೆಕ್ಟ್ ಕಟ್ಟುತ್ತಿದ್ದರೆ ಆಗ ಪ್ರಧಾನಮಂತ್ರಿಯವರು ದೇಶದ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಮಧ್ಯೆ ಪ್ರವೇಶ ಮಾಡುವಂತಹ ಅಗತ್ಯವಿತ್ತು. ಇವತ್ತು ಬಚಾವತ್ ಆಯೋಗದ ತೀರ್ಮಾನದ ಅಡಿಯಲ್ಲಿ, ಪ್ಲಾನಿಂಗ್ ಕಮಿಷನ್ ಒಮ್ಮತದ ಪ್ರಕಾರ ಈ ಜಲಾಶಯವನ್ನು ಕಟ್ಟುತ್ತಿರುವಂತಹ ಇದರ ಬಗ್ಗೆ ಪ್ರಸ್ತಾಪ ಮಾಡುವಂತಹ ಪ್ರಶ್ನೆ ಬರುವುದಿಲ್ಲವೆಂದು ಹೇಳಿದರೆ ಇವತ್ತು ಈ ಪ್ರಶ್ನೆ ಉದ್ಭವವಾಗುತ್ತಾ ಇರಲಿಲ್ಲ, ಎರಡನೆಯದು ಇವತ್ತು ಆಂಧ್ರಪ್ರದೇಶ ತಮ್ಮ ಸರ್ಕಾರದ ಬೆಂಬಲವನ್ನು ಕೊಡುತ್ತಿದೆ ಎನ್ನುವ ಒಂದೇ ಕಾರಣಕ್ಕೋಸ್ಕರ ಪ್ರಧಾನಮಂತ್ರಿಯವರನ್ನು ಮನ ಬಂದಂತೆ ಕುಣಿಸಬಹುದೆಂಬ ಹುನ್ನಾರ ಹಾಕುತ್ತಾ ಇದೆ, ಅದಕ್ಕೆ ಅವರು ಬಗ್ಗುಬಡಿದು ಬನ್ನಿ ಮಾತನಾಡೋಣ, ನಿಮ್ಮ ಸಮಸ್ಯೆ ನನಗೆ ಮನವರಿಕೆ ಮಾಡಿ ಕರ್ನಾಟಕ ರಾಜ್ಯ ಎಲ್ಲಿ ತಪ್ಪು ಮಾಡಿದೆ.

ನನಗೆ ಬಂದು ಹೇಳಿ ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿಯವರನ್ನು, ಮಂತ್ರಿಯವರನ್ನು, ಅವರ ಲೋಕಸಭಾ ಸದಸ್ಯರನ್ನು ಕರೆದು ಜೊತೆಯಲ್ಲಿ ಮಾತನಾಡಿ ನಮ್ಮ ಕಡೆಯಿಂದ ಏನಾದರೂ ತಪ್ಪು ಹೆಜ್ಜೆ ಇಟ್ಟಿದ್ದರೆ, ನಮ್ಮ ಜೊತೆ ಕರೆದು ಮಾತನಾಡುವುದಕ್ಕೆ ಮಾಜಿ ಕರ್ನಾಟಕದ ಮುಖ್ಯಮಂತ್ರಿಗಳಾಗಿ ದೇಶದ ಪ್ರಧಾನಮಂತ್ರಿಗಳಾಗಿ ಮಾತನಾಡುವುದಕ್ಕೆ ಅವರಿಗೆ ಎಲ್ಲಾ ಅಧಿಕಾರ, ಹಕ್ಕು ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಈ ರೀತಿ ಕೂಗಾಡುವಂತಹ ಪ್ರಯತ್ನಕ್ಕೆ ದಾರಿ ತಪ್ಪಿಸುವಂತಹ ಪ್ರಯತ್ನ ಬ್ಲಾಕ್‌ಮೆಲ್ ಮಾಡುವಂತಹ ಜನರಿಗೆ ನಾವು ಅವರ

ಮಾತಿಗೆ ಒಪ್ಪಿಗೆಯನ್ನು ಕೊಟ್ಟಂತೆ ಆಗುತ್ತದೆ ತಾನೇ? ಮಾತನಾಡುವುದಕ್ಕೆ ಪ್ರಾರಂಭಮಾಡುವಂತೆ ಆಗುತ್ತದೆ ತಾನೆ? ಇದು ಒಂದು ಅಪರಾಧ ತಾನೆ? ಹೀಗಾದರೆ ಇವತ್ತು ಮಾತನಾಡುವುದಕ್ಕೆ ಏನೂ ಉಳಿಯುವುದಿಲ್ಲ. ನಾನು ಜವಾಬ್ದಾರಿಯುತವಾದ ಸ್ಥಾನದಲ್ಲಿದ್ದು, ವಿರೋಧಪಕ್ಷದ ನಾಯಕನಾಗಿ, ಮಾನ್ಯ ಮುಖ್ಯಮಂತ್ರಿಯವರು ನನಗೆ ಸಭೆಗೆ ಬರಲು ಆಮಂತ್ರಣವನ್ನು ಕೊಟ್ಟರೂ ಸಹ ನಾನು ಸಭೆಗೆ ಹೋಗುತ್ತಾ ಇಲ್ಲ. ನಿನ್ನೆ ರಾತ್ರಿ ಮುಖ್ಯಮಂತ್ರಿಯವರಿಗೆ ಪತ್ರ ಬರೆದು ನಾನು ಬರುತ್ತಾ ಇಲ್ಲವೆಂದು ತಿಳಿಸಿದ್ದೇನೆ.

ಇವತ್ತು ಒಂದು ಸಂಗತಿಯನ್ನು ಮಾನ್ಯ ಉಪ ಮುಖ್ಯಮಂತ್ರಿಯವರು ಗಮನಿಸುತ್ತೀರೆಂದು ನಾನು ಅಂದುಕೊಂಡಿದ್ದೇನೆ. ಆಂಧ್ರಪ್ರದೇಶದ ಉಚ್ಚ ನ್ಯಾಯಾಲಯ ತನಿಖೆಯು ವ್ಯಾಪ್ತಿಯಲ್ಲಿ ಸಹ ಒಂದು ತೀರ್ಪು ನೀಡಿದ್ದು, ಮತ್ತು ಇದರ ಹಿನ್ನೆಲೆಯಲ್ಲಿ ಅನಿವಾರ್ಯ ಕೋರ್ಟ್ ಹೇಳಿದೆ ಎಂದು ಹೇಳಿ ಆ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿಯವರು ಸಭೆಯನ್ನು ಕರೆದಿದ್ದಾರೆ. ನಮ್ಮ ಮುಖ್ಯಮಂತ್ರಿಯವರು ಹೋಗುತ್ತಾರೆ. ಇದಕ್ಕೆ ನಾನು ಹೇಳುವುದೇನೆಂದರೆ ನಮ್ಮಲ್ಲಿ ಕಾನೂನು ತಜ್ಞರು ಇಲ್ಲವೇ? ನಾವು ದೊಡ್ಡ ದೊಡ್ಡ ಅಡ್ವೊಕೇಟ್‌ಗಳನ್ನು ಇಟ್ಟುಕೊಂಡಿಲ್ಲವೇ? ಆಂಧ್ರಪ್ರದೇಶದ ಹೈಕೋರ್ಟ್ ತೀರ್ಪು ಕೊಡುತ್ತಿದ್ದ ಹಾಗೆ ಈ ರೀತಿ ತಕ್ಷಣ ಅಪ್ಲಿಕೇಷನ್ ಹಾಕಿದರು. ಬಹಳ ವ್ಯವಸ್ಥಿತವಾದ ಸಂಚು, ಗೊತ್ತಿದ್ದು ಆಗುವಂತಹ ಅಪರಾಧ ಹಾಗೂ ನಮ್ಮ ಜನತೆಗೆ ವಂಚನೆ ಮಾಡುವುದು ನಡೆಯುತ್ತಿದೆ., ಎಂಬುದು ತಮಗೆ ಗೊತ್ತಿದೆ. ಇಲ್ಲಿ ಗಂಟೆಗಟ್ಟಲೆ ಚರ್ಚೆ ನಡೆದು ನಾವು ವಾಕ್ ಔಟ್ ಮಾಡಿದ್ದೇವೆ. ಆಂಧ್ರಪ್ರದೇಶದ ಹೈಕೋರ್ಟಿಗೆ ಹೋಗುತ್ತಿದ್ದ ಹಾಗೆಯೇ ಇವರ ಇಂಟಲಿಜೆನ್ಸಿ ಸತ್ತಿತ್ತಾ? ನಮ್ಮವರು ಏಕೆ ಅಪೀಯರ್ ಆಗಲಿಲ್ಲ? ಸಾಕಷ್ಟು ಇಲ್ಲಿ ಚರ್ಚೆಯಾಯಿತು. ಈಗ ಆ ಕೋರ್ಟಿನ ಆಜ್ಞೆಯ ವಿರುದ್ಧ ಸುಪ್ರೀಂಕೋರ್ಟ್‌ಗೆ ಹೋಗಿದ್ದು, ನಿಮಗೆ ಜ್ಯೂರಿಸ್‌ಡಿಕ್ಷನ್ ಇಲ್ಲವೆಂದು ಹೇಳಬೇಕಾಗಿತ್ತು ಅದರ ಬದಲಿಗೆ ಆ ಕುಂಟು ನೆಪವನ್ನು ಅಧಾರವಾಗಿಟ್ಟುಕೊಂಡು ಮಾತುಕತೆಯಾಗುವಂತಹ ಒಂದು ಕೆಲಸವನ್ನು ನೀವು ಏನು ಮಾಡುತ್ತಿದ್ದೀರಿ, ಇದು ನಮಗೆ ತುಂಬಾ ಅನುಮಾನಕ್ಕೆ ಎಡೆಮಾಡಿದೆ. ನ್ಯಾಯಾಲಯದ ಹೆಸರಿನಲ್ಲಿ ಒಂದು ಹೊಸ ರಾಜಕೀಯ ಪ್ರಾರಂಭವಾಗುತ್ತಿದೆಯೋ, ಏನೋ ಎಂಬ ಅನುಮಾನ ನಮಗೆ ಸ್ಪಷ್ಟವಾಗಿ ಇದೆ. ಇಲ್ಲಿ ನಾವು ಗಮನಿಸಿಬೇಕಾದದ್ದು, ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿತ್ತು. ಅದು ಕೃಷ್ಣ ಬೇಸಿನ್‌ಇರಬಹುದು, ಕಾವೇರಿ ಬೇಸಿನ್ ಇರಬಹುದು, ಇವುಗಳ ಕಾರ್ಯವನ್ನು ಅಮೆಯ ವೇಗದಲ್ಲಿ ಮಾಡಿಕೊಂಡು, ಯೋಜನೆಗಳನ್ನು ಮಾಡಿಕೊಂಡು ಕೈ ಕಟ್ಟಿಕೊಂಡು ಕುಳಿತುಕೊಂಡಿದ್ದರೆ ಅದ್ದರಿಂದ ದುಷ್ಪರಿಣಾಮ, ಹೊಸ ಹೊಸ ಸಮಸ್ಯೆಗಳು ಉದ್ಭವವಾಗುತ್ತದೆ.

ಕ್ರಿ.ಶ. 2000 ನಂತರ ಸಿಗಬೇಕಾದ ಎಲ್ಲಾ ಸೌಲತ್ತುಗಳನ್ನು ಅವರು ಉಪಯೋಗ ಮಾಡಿಕೊಂಡು ನಮ್ಮ ಯೋಜನೆಗೆ ಕಲ್ಲು ಹಾಕುವ ಪ್ರಯತ್ನ ಮಾಡುವ ಈ ಸಂದರ್ಭದಲ್ಲಿ ನಾವು ಇವತ್ತು ಮಾತುಕತೆಗೆ ಹೋದಂಥದ್ದು ಖಂಡಿತಾ ಯಾವ ಕಾರಣಕ್ಕೂ ಸರಿಯಲ್ಲ ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ನಾನು ಹೇಳುತ್ತಿದ್ದೇನೆ. ನಾನು ಬಹಳ ಹಿಂದಿನಿಂದಲೂ, ಯೋಜನಾ ಆಯೋಗ ನೀಡಿರುವ ಅನುಮತಿಯಂತೆ ಆಲಮಟ್ಟಿ ಜಲಾಶಯದ ಎತ್ತರಕ್ಕೆ ಅಲ್ಲಿ ಆಲಮಟ್ಟಿ ಅಣೆಕಟ್ಟು ನಿರ್ಮಾಣವಾಗಬೇಕೇ ಹೊರತು ಬೇರೆ ಯಾವುದೇ ಕಾರಣಕ್ಕೂ ಈ ರೀತಿ ಮಾತುಕತೆ ಮತ್ತೊಂದು ಈ ರೀತಿ ಮಧ್ಯೆ ಮಧ್ಯೆ ಆಗುವುದು ಅಗತ್ಯವಿಲ್ಲವೆನ್ನುವ ಮಾನತ್ನು ನಾನು ಹೇಳಿದ್ದೇನೆ.

ಸನ್ಮಾನ್ಯ ಅಧ್ಯಕ್ಷರೆ, ಯಾವ ಪರಿಸ್ಥಿತಿ? ನಾನು ಆ ಜುರಾಲ ಅಣೆಕಟ್ಟೆಯ ಎತ್ತರವನ್ನು ನೋಡಿಕೊಂಡು ಬಂದು ಮಾತನಾಡಿದಾಗ ನಮ್ಮವರೇ ಸದನದ ಒಳಗೆ ಹೊರಗೆ ನಮ್ಮನ್ನು ತಮಾಷೆ ಮಾಡಿದರು. ಅವರು ಆನಂದವಾಗಿ ಎತ್ತರವಾಗಿ ಕಟ್ಟುವುದಕ್ಕೆ ನಾವು ಬಿಟ್ಟೊ ಆದರೆ ಯೋಜನಾ ಆಯೋಗದ ತೀರ್ಮಾನದ ಪ್ರಕಾರ ನಾವು ಕಟ್ಟುವ ಆಲಮಟ್ಟಿ ಅಣೆಕಟ್ಟೆಗೆ ಅಡ್ಡಿ ಮಾಡುವ ಒಂದು ಕುತಂತ್ರದಿಂದ ಸನ್ಮಾನ್ಯ ಅಧ್ಯಕ್ಷರೆ, ಒಂದು ಮಾತನ್ನು ಹೇಳುತ್ತೇನೆ, ನಾನಂತೂ ಪ್ರಧಾನಮಂತ್ರಿಯವರನ್ನು ಇಕ್ಕಟ್ಟಿಗೆ ಸಿಗಿಸುವುದಕ್ಕೆ ಸಿದ್ದನಿಲ್ಲ, ಇನ್ನೂರು ಅಥವಾ ನೂರು ಐವತ್ತು, ನೂರು ಕೋಟಿ ರೂಪಾಯಿಯ ಏನೂ ಒಂದು ಹಣ ಇಡೀ ದೇಶಕ್ಕೆ ಕೊಡುವ ಭಾಗ ನಮಗೆ ಬಂದರೆ ಬರಲಿ, ಬರದೇ ಇದ್ದರು ನಾವು ಚಿಂತೆ ಮಾಡುವುದಿಲ್ಲ. ಏತಕ್ಕೆ? ಇವತ್ತು ಕರ್ನಾಟಕ ರಾಜ್ಯದ ಜನ, ನೀವು ಪ್ರಾಮಾಣಿಕವಾಗಿ ಜನರು ಕೊಟ್ಟಂಥ ಹಣವನ್ನು ಉಪಯೋಗ ಮಾಡುತ್ತೇವೆಂದರೆ ನೀವು ಒಂದೇ ಸಾರಿ ಕರೆ ಕೊಟ್ಟು ತಕ್ಷಣ ಒಂದು ಇನ್ನೂರು ಕೋಟಿ, ಮುನ್ನೂರು ಕೋಟಿ ರೂಪಾಯಿಗಳನ್ನು ಕೃಷ್ಣಾ ಭಾಗ್ಯ ಜಲನಿಗಮಕ್ಕೆ ಕೊಡಲಿಲ್ಲವೇ ಸ್ವಾಮಿ?

ಶ್ರೀ ಸಿದ್ಧರಾಮಯ್ಯ : ಮಾನ್ಯ ಯಡಿಯೂರಪ್ಪನವರೆ, ಆ ದುಡ್ಡು ಕೂಡ ಜನರ ದುಡ್ಡೇ, ದೇಶದ ದುಡ್ಡು, ಅದರಲ್ಲಿ ನಮ್ಮ ದುಡ್ಡು ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೌದು, ಸನ್ಮಾನ್ಯ ಸಿದ್ಧರಾಮಯ್ಯನವರೆ, ನಾನೇನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ, ನನ್ನ ದಾಟಿ ಏನು ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಿ. ಯಾವುದೇ ಹಣ ಯಾರದೂ ಅಲ್ಲ, ಅದು ಜನರು ಕೊಟ್ಟಂಥ ತೆರಿಗೆಯ ಹಣ ಕೇಂದ್ರ ಸರ್ಕಾರ ಕೊಟ್ಟರು ಇಡೀ ದೇಶಕ್ಕೆ ಕೊಡಬೇಕಾಗುತ್ತದೆ. ರಾಜ್ಯ ಸರ್ಕಾರದವರು ಅದೇ ಹಣವನ್ನು ವ್ಯಯ ಮಾಡುತ್ತಿದ್ದಾರೆ. ಆದರೆ ಈ ಕಾರಣಕ್ಕಾಗಿ ನಮ್ಮ ರಾಜ್ಯದ ಹಿತವನ್ನು ಬಲಿಕೊಡುವುದಕ್ಕೆ ನಾವಂತೂ ಸಿದ್ದರಿಲ್ಲ. ಆಕಸ್ಮಾತ್ ಪ್ರಧಾನಮಂತ್ರಿಯವರನ್ನು ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಾಗ ಆ ಇನ್ನೊಂದು ಕೋಟಿ ರೂಪಾಯಿಗಳೇ ಬಹಳ ಮುಖ್ಯವೆನ್ನುವುದಾದರೆ ಆ ಇನ್ನೂರು ಕೋಟಿ ರೂಪಾಯಿಗಳು ಬೇಡವೆಂದು ಹೇಳುವವನು ನಾನು.

ಇನ್ನೂ ಸಾವಿರ ಕೋಟಿ ರೂಪಾಯಿಗಳನ್ನು ರಾಜ್ಯದ ಜನರಿಂದ ಸಂಗ್ರಹಣೆ ಮಾಡೋಣ, ಕಟ್ಟೋಣ. ನಾವು ಕನ್ನಡ ನಾಡಿನ ಜನ ನಿಮ್ಮನ್ನು ಬೇಕಾದರೆ ಇಕ್ಕಟ್ಟಿಗೆ ಸಿಗಿಸುವುದಿಲ್ಲವೆಂದು ಪ್ರಧಾನಮಂತ್ರಿಗಳಿಗೆ ಹೋಗಿ ಹೇಳೋಣ. ನಮಗೆ ಸಿಗಬೇಕಾದ ಹಕ್ಕು, ಕಾನೂನಿನ ಪ್ರಕಾರವಾಗಿ ಸಿಗಬೇಕಾದ ಪಾಲು ಹಣ ಬೇರೆ ರಾಜ್ಯಕ್ಕೆ ಸಿಗುವಂತೆ ನಮಗೂ ಸಿಗಬೇಕೆಂದು ಹೋರಾಟ ಮಾಡಿ ತೆಗೆದುಕೊಳ್ಳೋಣ. ಇದು ಬೇರೆ ವಿಷಯ ಆದರೆ ಇಲ್ಲಿ, ಇವತ್ತು ಒಬ್ಬ ರಾಜ್ಯದ ಮುಖ್ಯಮಂತ್ರಿಯಾಗಿ ಒಂದೂ, ಕೇಂದ್ರ ಸರ್ಕಾರಕ್ಕೆ ಬೆಂಬಲ ಕೊಡುತ್ತಿರುವ ಒಂದು ಮುಖ್ಯ ಪಕ್ಷವಾಗಿ ಈ ರೀತಿಯಾಗಿ ಬ್ಲಾಕ್ ಮೇಲ್ ಮಾಡುವಂಥ ಒಂದು ಕುತಂತ್ರ ತಂತ್ರ, ಇದಕ್ಕೆ ಮಣಿಯುವಂಥದ್ದು, ಅವರನ್ನು ತೃಪ್ತಿಪಡಿಸುವುದಕ್ಕೆ ಈ ಸಭೆಯನ್ನು ಕರೆಯುವುದು ಮತ್ತೇನಿದೆ ಕಾರಣ? ಬೇರೆ ಸಂದರ್ಭದಲ್ಲಿ ಕರೆದಿದ್ದರೆ ನನಗೆ ಅರ್ಥವಾಗುತ್ತಿತ್ತು. ನಿಮ್ಮ ಸರ್ಕಾರಕ್ಕೆ ಬೆಂಬಲ ವಾಪಸ್ ತೆಗೆದುಕೊಳ್ಳುತ್ತೇವೆಂದು ಅವರು ಪತ್ರ ಬರೆಯುತ್ತಾರೆ, ಬೆದರಿಸುತ್ತಾರೆ. ಸರ್ಕಾರವನ್ನು ಉಳಿಸಿಕೊಳ್ಳುವುದಕೋಸ್ಕರ ಮಾತುಕತೆಗೆ ಹೋಗುವುದಾದರೆ ಅಂಥ ಸ್ಥಾನದಲ್ಲಿ ಬಹುಶಃ ಈ ದೇಶದ ಸನ್ಮಾನ್ಯ ಪ್ರಧಾನಮಂತ್ರಿಗಳು ಉಳಿಯುವುದಿಲ್ಲ, ಬೇಕಾದರೆ ಬಿಟ್ಟು ಬರುತ್ತೇನೆ,

ಆದರೆ ಯಾವುದೇ ಕಾರಣಕ್ಕೆ ಈ ರೀತಿ ಬ್ಲಾಕ್‌ಮೇಲ್ ಮಾಡುವುದನ್ನು ಕಾಂಪ್ರಮೈಸ್ ಮಾಡಿಕೊಳ್ಳುವುದಿಲ್ಲವೆಂದು ಹೇಳುತ್ತಾರೆನ್ನುವ ವಿಶ್ವಾಸ ನನಗಿದೆ. ಆದರೆ ಈ ಮಧ್ಯದಲ್ಲಿ, ತಾವು, ನೋಡಿ ಸ್ವಾಮಿ, ಹೇಗಿದೆ ಎಲ್ಲಾ ರೀತಿಯಿಂದಲೂ ನಮ್ಮನ್ನು ಎಷ್ಟು ಹಗುರವಾಗಿ ತೆಗೆದುಕೊಂಡರು? ಬೇಕಾದಾಗ ನಮ್ಮನ್ನು ಕರೆದು ಮಾತನಾಡುವುದು. ತಮಿಳುನಾಡಿಗೆ ಹೋದಿರಿ, ನಮ್ಮನ್ನು ಕರೆಯಲಿಲ್ಲ ಮಾತನಾಡಲಿಲ್ಲ. ಬಂದ ಮೇಲೆ ಹೇಳುತ್ತೀರೇನೋ ಎಂದು ತಿಳಿದುಕೊಂಡಿದ್ದೆವು, ಆದರೆ ಹೌಸ್‌ನಲ್ಲಿ ಹೇಳಲಿಲ್ಲ ಅಲ್ಲಿ ಹೇಳಲಿಲ್ಲ, ಅನೇಕ ವಿಷಯಗಳು ಪ್ರಕಟವಾಗುತ್ತದೆ. ಇವತ್ತಲ್ಲ ನಾಳೆ ಬಣ್ಣ ಬಯಲಾಗುತ್ತದೆ. ಆದರೆ ಇವತ್ತು ಆಂಧ್ರ ಪ್ರದೇಶದ ಮುಖ್ಯಮಂತ್ರಿ, ಪ್ರಧಾನಮಂತ್ರಿಗಳ ಜೊತೆ ಮಾತುಕತೆಗೆ ಹೋಗುವುದಕ್ಕೆ ಮುಂಚೆ ಪ್ರತಿಪಕ್ಷಗಳ ಸಭೆಯನ್ನು ಕರೆದು ಮಾತನಾಡುತ್ತಾರೆ. ನೀವೂ ಪ್ರತಿಪಕ್ಷಗಳಲ್ಲಿ ನಾವು ಯಾರು ಬರುತ್ತಿವ್ವೋ ಬಿಡುತ್ತೀವ್ವೋ ಅದು ಒಂದೊಂದು ಪಕ್ಷದ್ದು ಬೇರೆ ಬೇರೆ ಕಾರಣ ಇರಬಹುದು ನಿಮ್ಮ ಮುಖ್ಯಮಂತ್ರಿಗಳು ಹೋದದ್ದು ತಪ್ಪೆಂದು ಹೇಳುವುದಕ್ಕೆ ನಾನು ಸಿದ್ಧನಿಲ್ಲ.

ಆದರೆ ಪ್ರಶ್ನೆ ಇರುವುದು ಏತಕ್ಕೆ ಹೋಗುತ್ತೀರಾ? ಪ್ರತಿ ಪಕ್ಷಗಳಸಭೆಯನ್ನು ಕರೆಯಬಹುದಾಗಿತ್ತಲ್ಲಾ? ಒಂದು ಪತ್ರ ಬರೆಯುತ್ತಾರೆ, ನೀರಾವರಿ ಸಚಿವರು ಮನೆಗೆ ಹೋಗುವ ಆರೂವರೆ ಏಳು ಗಂಟೆ ಸಮಯದಲ್ಲಿ ಒಂದು ಟೆಲೆಕ್ಸ್ ಮೆಸೇಜ್ ಬಂದಿದೆ ಎಂದು ಓದುತ್ತಾರೆ. ಬೇಕಾದರೆ ಬನ್ನಿ, ಬಿಟ್ಟರೆ ಬಿಡಿ ಎನ್ನುವ ಈ ಧಾಟಿ, ಈ ರೀತಿ ರಾಜ್ಯದ ಹಿತವನ್ನು ಸಂಪೂರ್ಣವಾಗಿ ಬಲಿ ಕೊಡುವ, ಒಂದು ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಏನೊಂದು ರಾಜಕಾರಣ ನಡೆಯುತ್ತಿದೆ ಇದನ್ನು ಕನ್ನಡ ನಾಡಿನ ನಾಲ್ಕು ಮುಕ್ಕಾಲು ಕೋಟಿ ಜನತೆ ಕ್ಷಮಿಸುವುದಿಲ್ಲ, ನೀವು ತಪ್ಪುದಾರಿಗೆ ಹೋಗುತ್ತಿದ್ದೀರಿ. ನನಗನಿಸುತ್ತದೆ ಇವತ್ತು ಅಲ್ಲಿಗೆ ಹೋಗಿ ಏನು ಮೂರು ರಾಜ್ಯದ ಮುಖ್ಯಮಂತ್ರಿಗಳು ಜೊತೆ ಮಾತನಾಡುವುದು ಮತ್ತೊಮ್ಮೆ ನಮ್ಮನ್ನು ಇಕ್ಕಟ್ಟಿಗೆ ಸಿಗಿಸುವಂಥ ಒಂದು ತಂತ್ರಗಾರಿಕೆ ಏನು ನಡೆದಿದೆ, ದೆಹಲಿಯಲ್ಲಿ ಈ ಕುರ್ಚಿಯನ್ನು ಉಳಿಸಿಕೊಳ್ಳುವುದೇ ಮುಖ್ಯವಾದರೆ, ಸ್ವಾಮಿ ಖುಷಿ ಬಂದಂತೆ ಮಾಡಿ, "ಗೋಡಾ ಹೈ ಮೈದಾನ ಹೈ" ಜನರಿದ್ದಾರೆ ಹೋಗುತ್ತೇವೆ. ಹೋರಾಟ ಮಾಡುತ್ತೇವೆ ನಮ್ಮ ದಾರಿ ನಮಗೆ ನಿಮ್ಮ ದಾರಿ ನಿಮಗೆ. ಆದರೆ ಒಂದು ಮಾತು ಮಾತ್ರ ಸ್ಪಷ್ಟ ಇವತ್ತು ಪೂರ್ವಾಪರ ಯೋಚನೆಯನ್ನು ಮಾಡಿಕೊಂಡು ಯಾವ ಸಂದರ್ಭದಲ್ಲಿ ಪ್ರಧಾನಮಂತ್ರಿಗಳು ಈ ಸಭೆಯನ್ನು ಕರೆದಿದ್ದಾರೆನ್ನುವುದನ್ನು ಅರ್ಥ ಮಾಡಿಕೊಂಡು, ಪ್ರಧಾನ ಮಂತ್ರಿಗಳಲ್ಲಿ ರಿಕ್ವೆಸ್ಟ್ ಮಾಡಿಕೊಂಡು, ಈ ಸಂದರ್ಭದಲ್ಲಿ ನಾವು ಈ ಸಭೆಗೆ ಬರುವ ಸಾಧ್ಯತೆ ಇಲ್ಲ, ದಯಮಾಡಿ ನಮ್ಮನ್ನು ಇಕ್ಕಟ್ಟಿಗೆ ಸಿಗಿಸಬೇಡಿ, ಆಂದ್ರಪ್ರದೇಶದವರನ್ನು ಕರೆದು ನಿಮ್ಮ ಬೆಂಬಲ ಕೊಡುತ್ತಿದ್ದೀರೆನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಪ್ರಧಾನಮಂತ್ರಿಯಾಗಿ ನಾನು ಕೆಲಸ ಮಾಡುವಾಗ ನೀವು ಎಲ್ಲದರ ಬಗ್ಗೆ ಇಂಟರ್‌ಫಿಯರ್ ಮಾಡುವುದು, ಬ್ಲಾಕ್‌ಮೇಲ್ ಮಾಡುವುದು ಇದು ಸರಿಯಲ್ಲವೆಂದು ಆ ರಾಜ್ಯದ ಮುಖ್ಯಮಂತ್ರಿಗಳಿಗೆ ಎಚ್ಚರಿಕೆ ನೀಡಿ ಎಂದು ಹೇಳಬೇಕಾಗಿತ್ತೆ ಹೊರತು, ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ನಿಯೋಗವನ್ನು ಕರೆದುಕೊಂಡು ಅಲ್ಲಿಗೆ ಹೋಗುವುದು ಬಹುಶಃ ಇದು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲವೆನ್ನುವ ಮಾನತ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಅಧ್ಯಕ್ಷರು : ಈಗ ಶಾಸನ ರಚನೆ, ವಿಧೇಯಕವನ್ನು ಮಂಡಿಸುವುದು ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) 1996 .....

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ, ಸರ್ಕಾರ ನಾವು ಹೇಳಿದ್ದೆಲ್ಲಾ ಸರಿ, ನಿಯೋಗ ಹೋಗಿರತಕ್ಕಂಥದ್ದು ಬಹಳ ಅಕ್ರಮ, ಅನ್ಯಾಯ, ಈ ರಾಜ್ಯದ ಹಿತವನ್ನು ಕಾಪಾಡುವಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ, ಈ ರಾಜ್ಯವನ್ನು ಬಲಿ ಕೊಡುತ್ತಿದ್ದಾರೆ, ಈ ರಾಜ್ಯದ ಜನತೆಯನ್ನು ಕಡೆಗಣಿಸಲಿದ್ದಾರೆ, ಈ ರಾಜ್ಯಕ್ಕೆ ಮೋಸ ಮಾಡುತ್ತಿದ್ದಾರೆ, ಈ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದ್ದಾರೆ, ಅಲ್ಲಿ ಕೇಂದ್ರ ಸರ್ಕಾರವನ್ನು ಉಳಿಸುವುದಕೋಸ್ಕರವಾಗಿ ಚಂದ್ರಬಾಬು ನಾಯ್ಡು ಏಜೆಂಟರಾಗಿ ಕೇಂದ್ರದ ಏಜೆಂಟರಾಗಿ, ಕೇಂದ್ರದ ಗುಲಾಮರಾಗಿ ಇವರು ಹೋಗುತ್ತಿದ್ದಾರೆಂದು ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

ಶ್ರೀ ಸಿದ್ಧರಾಮಯ್ಯ : ನೀವು ಹೇಳಿದ್ದೆಲ್ಲಾ ನಾವು ಕೇಳಬೇಕು, ನಾವು ಹೇಳಿದ್ದನ್ನು ನೀವು ಕೇಳುವ ಹಾಗೆ ಇಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ನೀವು ಹೇಳುವುದಕ್ಕೆ ತಯಾರಾಗಿಲ್ಲವಲ್ಲ.

ಶ್ರೀ ಸಿದ್ಧರಾಮಯ್ಯ : ಅವರು ಹೇಳುತ್ತಿದ್ದಾರಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರು ಬೇರೆ ವಿಚಾರಕ್ಕೆ ಹೋಗುತ್ತಿದ್ದಾರೆ. ನೀವು ಸುಮ್ಮನೆ ಕುಳಿತಿದ್ದೀರಿ.

ಶ್ರೀ ಸಿದ್ಧರಾಮಯ್ಯ : ನೀವು ಹೇಳಿದ್ದನ್ನೆಲ್ಲಾ ನಾವು ಕೇಳಿಕೊಂಡು ಕುಳಿತುಕೊಳ್ಳಬೇಕಾ? ಅವರು ಹೇಳುತ್ತಿದ್ದಾರೆ ಸ್ವಲ್ಪ ಕೇಳಿಸಿಕೊಳ್ಳಿ.

+ ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರು, ಮಾನ್ಯ ವಾಟಾಳ್‌ರವರು, ವಿರೋಧಪಕ್ಷದ ನಾಯಕರು, ಇಂದು ಮಾನ್ಯ ಪ್ರಧಾನಮಂತ್ರಿಗಳು ದೆಹಲಿಯಲ್ಲಿ ಕರೆದಿರುವ ಸಭೆಯ ಬಗ್ಗೆ ತಮ್ಮದೇ ಆದಂಥ ದಾಟಿಯಲ್ಲಿ ತಮ್ಮ ವಿಚಾರವನ್ನು ಈ ಸದನದಲ್ಲಿ ಮಂಡಿಸಿದ್ದಾರೆ. ಮೊದಲನೆಯದಾಗಿ ಈ ಸಭೆಯನ್ನು 6ನೇ ತಾರೀಖಿನಂದು ಮಾನ್ಯ ಪ್ರಧಾನಮಂತ್ರಿಗಳು ಕರೆದಿದ್ದರು. 5ನೇ ತಾರೀಖಿನಂದು ಮುಖ್ಯಮಂತ್ರಿಗಳು, ನಾನು, ಉಪ-ಮುಖ್ಯಮಂತ್ರಿಗಳು ಹಾಗೂ ನೀರಾವರಿ ಮಂತ್ರಿಗಳು ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆಗೆ ಮಾತುಕತೆಗೆ ಹೋದಂಥ ಸಂದರ್ಭದಲ್ಲಿ, 6ನೇ ತಾರೀಖಿನಂದು ಮಾನ್ಯ ಪ್ರಧಾನ ಮಂತ್ರಿಗಳು ದೆಹಲಿಯಲ್ಲೂ ಸಹ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಮತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಗಳನ್ನು ಕರೆದು ಚರ್ಚೆ ಮಾಡುವ ಒಂದು ಪೂರ್ವನಿಯೋಜಿತವಾದ ಒಂದು ಕಾರ್ಯಕ್ರಮವೂ ಕೂಡ ಇತ್ತು. ಆದರೆ 5ನೇ ತಾರೀಖಿನಂದು ಮಾನ್ಯ ಪ್ರಧಾನ ಮಂತ್ರಿಗಳ ಮಾತೃಶ್ರೀಯವರು ನಿಧನರಾದ್ದರಿಂದ 6ನೇ ತಾರೀಖಿನಂದು ಸಭೆಯನ್ನು ನಡೆಸುವುದಕ್ಕಾಗಲಿಲ್ಲ.

ನಾವು ಕೂಡ ಮದ್ರಾಸ್‌ನಿಂದ ಬೆಂಗಳೂರಿಗೆ ಬರಬೇಕಾಯಿತು. ಆದ್ದರಿಂದ ಅಂದು ನಿಗದಿಪಡಿಸಿದಂಥ ಕಾರ್ಯಕ್ರಮ ಅವತ್ತು ನಡೆಯಲಿಲ್ಲ. ಆದುದರಿಂದ ತರಾತುರಿಯಲ್ಲಿ ಕರೆದಿರತಕ್ಕ ಸಭೆಯಲ್ಲ. ಅವರಿಗೆ ತಿಳಿದಿದೆ. ಆಲಮಟ್ಟಿ ಅಣೆಕಟ್ಟೆಯ ವಿಚಾರವಾಗಿ ಆಂಧ್ರಪ್ರದೇಶದ ಹೈ ಕೋರ್ಟಿನಲ್ಲಿ, ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಹಿಂದುಳಿದ ವರ್ಗದ ಒಂದು ಸಂಸ್ಥೆಯ ಅಧ್ಯಕ್ಷರಾದ ಕೃಷ್ಣಯ್ಯ ಎನ್ನುವವರು ಸಲ್ಲಿಸಿರುವ ರಿಟ್ ಅರ್ಜಿಗೆ ಸಂಬಂಧಿಸಿದ ಹಾಗೆ ರಾಜ್ಯ ಸರ್ಕಾರದವರು ನಾವು ನಮ್ಮ ನಿಲುವನ್ನು ಬಹಳ ಸ್ಪಷ್ಟವಾಗಿ ಪ್ರತಿಪಾದನೆಯನ್ನು ಮಾಡಿದ್ದೇವೆ. ನಾವು ತೆಗೆದುಕೊಂಡಿರುವ ನಿಲುವು ಬಚಾವತ್ ಅವಾರ್ಡ್‌ನ ಅಡಿಯಲ್ಲಿ 729 ಟಿಎಂಸಿ ನೀರಿನ ಬಳಕೆ

ಯಾವುದಿದೆ, ಅದು ಈ ಅವಾರ್ಡ್‌ನ ಒಳಗಡೆ ಇದೆ, ಆ ನೀರಿನ ಬಳಕೆಯನ್ನು ಆ ರಾಜ್ಯದ ಒಳಗಡೆ ಯಾವ ರೀತಿಯಲ್ಲಾದರೂ ಬಳಸಿಕೊಳ್ಳುವ ಸಂಪೂರ್ಣವಾದ ಅಧಿಕಾರ ನಮಗೂ ಇದೆ, ಅದೇ ರೀತಿ ಆಂಧ್ರಪ್ರದೇಶದ ರಾಜ್ಯದವರಿಗೆ ಕೊಟ್ಟಿರುವ ನೀರಿನ ಬಳಕೆ ಮಾಡುವ ಅಧಿಕಾರ ಅವರಿಗೂ ಇದೆ.

734 ಟಿಎಂಸಿ ಯಲ್ಲಿ 5 ಟಿಎಂಸಿ ನೀರನ್ನು ಮದ್ರಾಸ್‌ಗೆ ಕುಡಿಯುವ ನೀರಿನ ಬಳಕೆಗೆ ಕೊಟ್ಟಿರುವುದನ್ನು ಬಿಟ್ಟರೆ 729 ಟಿಎಂಸಿ ನೀರನ್ನು ನಾವು ಯಾವ ರೀತಿಯಲ್ಲಿ ಸಂಗ್ರಹಣೆ ಮಾಡಬೇಕು, ಯಾವ ರೀತಿಯಲ್ಲಿ ಅದನ್ನು ಸಂಗ್ರಹಣೆ ಮಾಡಿ ಇಟ್ಟುಕೊಳ್ಳಬೇಕು ಯಾವ ರೀತಿಯಲ್ಲಿ ಹಂಚಬೇಕು ಎನ್ನುವ ಸಂಪೂರ್ಣವಾದ ಅಧಿಕಾರ ನಮಗಿದೆ. ಇದನ್ನೇ ನಾವು ಅಲ್ಲಿ ಪ್ರತಿಪಾದನೆ ಮಾಡಿದ್ದೇವೆ. ಹಾಗೆ ಪ್ರತಿಪಾದನೆ ಮಾಡಿರುವ ಹಿನ್ನೆಲೆಯಲ್ಲಿ ಆಂಧ್ರಪ್ರದೇಶದ ಉಚ್ಚ ನ್ಯಾಯಾಲಯದವರು ಕೊಟ್ಟಿರುವ ತಡೆಯಾಜ್ಞೆಯನ್ನು ಫಸ್ಟ್ ಫೇಸ್‌ಗೆ ಸಂಬಂಧಪಟ್ಟ ಹಾಗೆ ಈ ಒಂದು ತಡೆಯಾಜ್ಞೆಯನ್ನು ಸಂಪೂರ್ಣವಾಗಿ ತೆರವು ಮಾಡಿದ್ದಾರೆ. ಬಾಕಿಯಿರುವುದಕ್ಕೆ ಸೆಂಟ್ರಲ್ ವಾಟರ್ ಕಮಿಷನ್ ಯಾರಿದ್ದಾರೆ, ಅವರು ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ ಅದನ್ನು ಸಲ್ಲಿಸಬೇಕು ಎಂದು ಹೇಳುವ ವಿಚಾರವನ್ನು ಕೂಡ ಉಚ್ಚ ನ್ಯಾಯಾಲಯ ಪ್ರತಿಪಾದನೆ ಮಾಡಿದೆ. ಆದುದರಿಂದ ಸೆಂಟ್ರಲ್ ವಾಟರ್ ಕಮಿಷನ್‌ರವರು ಉಚ್ಚ ನ್ಯಾಯಾಲಯಕ್ಕೆ ಹೋಗಿ, ಕರ್ನಾಟಕ ರಾಜ್ಯದ ಈ ಅಲಮಟ್ಟಿ ಅಣೆಕಟ್ಟೆಯ ವಿಚಾರದಲ್ಲಿ ಅವರು ತೆಗೆದುಕೊಂಡಿರುವ ಕ್ರಮವೇನು? ಅವರು ಯಾವ್ಯಾವ ಯೋಜನೆಗಳಿಗೆ ನಮಗೆ ಅಂಗೀಕಾರವನ್ನು ಕೊಟ್ಟಿದ್ದಾರೆ, 528 ಅಡಿ ಅಲ್ಲಿಯವರೆಗೆ ಅಂದರೆ, 512 ಅಡಿಯಿಂದ 528 ಅಡಿ, 16 ಅಡಿಯವರೆಗೆ ಇರುವ ಯಾವ ಕ್ರಸ್ಟ್‌ಗೇಟನ್ನು ನಾವು ಅಳವಡಿಸಬೇಕು, ಅದಕ್ಕೆ ಬೇಕಾಗಿರುವ ಅನುಮತಿಯನ್ನು ಸೆಂಟ್ರಲ್ ವಾಟರ್ ಕಮಿಷನ್‌ರವರು ತಮ್ಮ ಅನುಮತಿಯನ್ನು ಕೊಟ್ಟಿದ್ದಾರೆ. ಇದನ್ನೂ ಕೂಡ ನಮ್ಮ ಕೌಂಟರ್‌ನಲ್ಲಿ, ನಮ್ಮ ಪ್ರತಿವಾದದಲ್ಲಿ ಮಂಡಿಸಿದ್ದೇವೆ. ಆದ್ದರಿಂದ ಸೆಂಟ್ರಲ್ ವಾಟರ್ ಕಮಿಷನ್‌ರವರು ಇದರ ಬಗ್ಗೆ ಒಂದು ಹೇಳಿಕೆಯನ್ನು ಉಚ್ಚನ್ಯಾಯಾಲಯದಲ್ಲಿ ಕೊಡುತ್ತಾರೆ, ಇವತ್ತು ಅದು ನ್ಯಾಯಾಲಯದ ಮುಂದಿದೆ.

ಮಾನ್ಯ ಸಭಾಧ್ಯಕ್ಷರೆ, ತಮಗೆಲ್ಲಾ ಗೊತ್ತಿದೆ, ಈ ಒಂದು ವಿಚಾರ ಆಂಧ್ರಪ್ರದೇಶದ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಚರ್ಚೆಗೆ ಬಂದಾಗ, ಆಂಧ್ರಪ್ರದೇಶ ರಾಜ್ಯದ ಅಡ್ವೊಕೇಟ್ ಜನರಲ್‌ರವರೇ ಉಚ್ಚನ್ಯಾಯಾಲಯದಲ್ಲಿ ಒಂದು ಹೇಳಿಕೆಯನ್ನು ಕೊಟ್ಟರು, ಅದೇನೆಂದರೆ ಈ ಅಲಮಟ್ಟಿ ಅಣೆಕಟ್ಟೆಯ ವಿಚಾರದಲ್ಲಿ ನಾವು ರಾಜಕೀಯ ಪರಿಹಾರವನ್ನು ಕಂಡುಕೊಳ್ಳುತ್ತೇವೆ, ಇದರ ಬಗ್ಗೆ ಪ್ರಧಾನಮಂತ್ರಿಗಳ ಜೊತೆ ಮಾತುಕತೆಯಾಡುತ್ತೇವೆ, ಇದಕ್ಕೆ ಬೇಕಾಗಿರುವ ರಾಜಕೀಯ ಪರಿಹಾರಕ್ಕೆ ನಾವು ಈಗಾಗಲೇ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಂದು ಆಂಧ್ರಪ್ರದೇಶದ ಅಡ್ವೊಕೇಟ್ ಜನರಲ್‌ರವರು, ಅವರ ಉಚ್ಚನ್ಯಾಯಾಲಯದಲ್ಲೇ ಪ್ರತಿಪಾದನೆಯನ್ನು ಮಾಡಿದರು.

10.20 ಎ.ಎಂ

ಇದು ನಾವು ಮಾಡಿದ ಪ್ರತಿಪಾದನೆ ಅಲ್ಲ, ಹೈಕೋರ್ಟ್‌ನಲ್ಲೇ ಅವರೇ ಮಾಡಿದರು. ಆ ಸಂದರ್ಭದಲ್ಲಿ ಪ್ರಧಾನಿಗಳು ಈ ಒಂದು ವಿಚಾರವನ್ನು ಮನಗಂಡು ಅರನೇ ತಾರೀಖು ಮೀಟಿಂಗ್ ಅನ್ನು ಕರೆದರು. ಅದೇ ಮೀಟಿಂಗನ್ನು ಇವತ್ತೂ ಕರೆದಿದ್ದಾರೆ. ಈಗ ನಮಗಿರತಕ್ಕಂಥ ವಿಚಾರ ಯಾವುದು ಎಂದರೆ ಅಲಮಟ್ಟಿಯಲ್ಲಿ ನೀರನ್ನು ಶೇಖರಣೆ ಮಾಡಲು ಇರುವಂಥ ನಮ್ಮ ರಾಜ್ಯದ ಹಕ್ಕು ಯಾವುದಿದೆ,

ಆ ಹಕ್ಕನ್ನು ಆಂಧ್ರ ಪ್ರದೇಶದಿಂದಲೂ ಕಸಿಯಲಿಕ್ಕೆ ಆಗುವುದಿಲ್ಲ, ಮಹಾರಾಷ್ಟ್ರದಿಂದಲೂ ಕಸಿಯಲಿಕ್ಕೆ ಆಗುವುದಿಲ್ಲ, ಬಚಾವತ್ ತೀರ್ಪಿನ ಅಡಿಯಲ್ಲಿ 729 ಟಿ.ಎಂ.ಸಿ. ನೀರು ಯಾವುದಿದೆ, ಆ ನೀರಿನ ಬಳಕೆಯನ್ನು, ಸಂಪೂರ್ಣವಾಗಿರತಕ್ಕಂಥ ಅದರ ಉಪಯೋಗವನ್ನು ನಾವು ಮಾಡುತ್ತೇವೆ ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ಯಾವ ರೀತಿ ಅದನ್ನು ಬಳಸಿಕೊಳ್ಳಬೇಕು ಎನ್ನುವ ಅಧಿಕಾರವನ್ನು ನಮಗೆ ಕೊಟ್ಟಿರುವಾಗ, ಆಂಧ್ರಪ್ರದೇಶದವರಾಗಲೀ, ಮಹಾರಾಷ್ಟ್ರದವರಾಗಲೀ, ನಾವು ಯಾವ ರೀತಿ 729 ಟಿ.ಎಂ.ಸಿ.ನೀರನ್ನು ಸಂಗ್ರಹಣೆ ಮಾಡಬೇಕು, ಯಾವ ರೀತಿ ಹಂಚಿಕೊಳ್ಳಬೇಕು ಎನ್ನುವುದಕ್ಕೆ ನಾವು ಯಾರನ್ನೂ ಕಾಯಬೇಕಾಗಿಲ್ಲ.

ಇದನ್ನು ಈಗಾಗಲೇ ಸ್ಪಷ್ಟ ಮಾಡಿದ್ದೇವೆ. ಆದರೆ ಇವತ್ತು ಅವರು ನೀವು ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಏರಿಸಿ ನೀರನ್ನು ನಿಗದಿತ ಪ್ರಮಾಣಕ್ಕಿಂತಲೂ ಹೆಚ್ಚು ಸಂಗ್ರಹಣೆ ಮಾಡಿ ಬಚಾವತ್ ತೀರ್ಪಿನ ಉಲ್ಲಂಘನೆ ಮಾಡುತ್ತೀರಿ ಎನ್ನುವಂಥ ವಾದವನ್ನು ಎತ್ತಿದ್ದಾರೆ. ಬಚಾವತ್ ತೀರ್ಪಿನ ಉಲ್ಲಂಘನೆ ಮಾಡಿದರೆ ತಾನೇ ನಾವೇನಾದರೂ ಅಪರಾಧವನ್ನು ಮಾಡುವುದು. ಬಚಾವತ್ ತೀರ್ಪಿನ ಪ್ರಕಾರ ನಮಗೆ ಬಂದಿರತಕ್ಕ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುವುದರಲ್ಲಿ ಉಲ್ಲಂಘನೆಯನ್ನು ನಾವು ಮಾಡಿಲ್ಲ, ಮಾಡುವುದೂ ಇಲ್ಲ, 729 ಟಿ.ಎಂ.ಸಿ. ನೀರನ್ನು ನಾವು ಬಳಸಿಕೊಳ್ಳುತ್ತೇವೆ, ಹಾಗೆ ಬಳಸಿಕೊಳ್ಳುವಂಥಾದ್ದಕ್ಕೆ ಯಾರದೇ ಮರ್ಜಿಯಲ್ಲಿ ನಾವು ಹೋಗಬೇಕಾಗಿಲ್ಲ ಎನ್ನುವುದನ್ನು ಸರ್ಕಾರ ಸ್ಪಷ್ಟ ಮಾಡಿ ಹೇಳಿದೆ. ಇದಾದ ಮೇಲೆ ಇವತ್ತು ಮಾನ್ಯ ಪ್ರಧಾನಿಗಳು ಈ ಒಂದು ಸಭೆಯನ್ನು ಕರೆದಿದ್ದಾರೆ. ಈ ಸಭೆಯನ್ನು ಏಕೆ ಕರೆಯಬೇಕಾಗಿತ್ತು? ಈ ಸಭೆಯಿಂದ ಆಗಬೇಕಾಗಿರತಕ್ಕಂಥಾದ್ದು ಏನು? ಈ ಸಭೆಯಿಂದ ಆಗುವ ಪರಿಣಾಮ ಏನು? ಎಲ್ಲೋ ಒಂದು ಕಡೆ ನಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸುವಂಥ ಪ್ರಯತ್ನ ಮಾಡುತ್ತಾರೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರ ಮನಸ್ಸಿನಲ್ಲಿರುವ ಅನಿಸಿಕೆಯ ಹಿನ್ನಲೆಯಲ್ಲಿ ನಾನು ಹೋಗುವುದಿಲ್ಲ, ನಮ್ಮನ್ನು ಎಲ್ಲೋ ಒಂದು ಕಡೆ ಇಕ್ಕಟ್ಟಿಗೆ ಸಿಕ್ಕಿಸುತ್ತಾರೆ ಎನ್ನುವಂಥ ಮಾತನ್ನು ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರನ್ನು ಆಹ್ವಾನ ಮಾಡಿದ್ದಾರೆ, ಇದು ನಮ್ಮ ರಾಜ್ಯದ ಸಮಸ್ಯೆ, 729 ಟಿ.ಎಂ.ಸಿ. ನೀರನ್ನು ಬಳಕೆ ಮಾಡಿಕೊಳ್ಳಬೇಕಾಗಿತ್ತು. ಯಾವ ರೀತಿ ಬಳಕೆ ಮಾಡಿಕೊಳ್ಳುತ್ತೇವೆ ಮತ್ತು ನಮ್ಮ ಈ ನದಿ ನೀರಿನ ಬಳಕೆಗೆ ಸಂಬಂಧ ಪಟ್ಟಹಾಗೆ ಪ್ರಧಾನಿಗಳು ಒಂದು ಸಭೆಯಮ್ಮ ಕರೆದಾಗ, ಮಾನ್ಯ ಯಡಿಯೂರಪ್ಪನವರು ಯಾವ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದರು,

ಆ ವಿಷಯವನ್ನು ಅಲ್ಲೂ ಪ್ರಸ್ತಾಪ ಮಾಡಲು ಅವರಿಗೆ ಒಂದು ಅವಕಾಶವಿತ್ತು, ಆಂಧ್ರ ಪ್ರದೇಶದ ಮುಖ್ಯ ಮಂತ್ರಿ ಚಂದ್ರಬಾಬು ನಾಯ್ಡು ಅವರು ಹೇಳುವಂಥ ಒಂದು ಅವಕಾಶ ಕೂಡ ಆಗುತ್ತಿತ್ತು. ಬಹುಶಃ ನೀವು ಇದನ್ನು ರಾಜ್ಯದ ಹಿತದೃಷ್ಟಿಯಿಂದ, ಈ ಸದನದ ವಿರೋಧ ಪಕ್ಷದ ನಾಯಕರಾಗಿ ತಾವು ಈ ಒಂದು ಅವಕಾಶವನ್ನು ಬಳಸಿಕೊಳ್ಳಬೇಕಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಶ್ಚಿತವಾಗಿ. ನಾನು ಇಲ್ಲಿ ರಾಜಕಾರಣ ಬೆರೆಸುವುದಕ್ಕೆ ಪ್ರಯತ್ನ ಮಾಡಿದರೆ ಈ ಸ್ಥಾನದಲ್ಲಿ ಒಂದು ಕ್ಷಣ ಕುಳಿತುಕೊಳ್ಳುವುದಕ್ಕೆ ನನಗೆ ಅಧಿಕಾರವಿಲ್ಲ. ನಾನು ಹೇಳುತ್ತಿದ್ದೇನೆ, ಇವತ್ತು ಪ್ರಧಾನಿಯವರು, ನಮ್ಮ ನಿಲುವು, ವಾಸ್ತವಿಕ ಸ್ಥಿತಿಯನ್ನು ತಿಳಿದುಕೊಳ್ಳುವುದಕ್ಕೆ ನಮ್ಮನ್ನು ಕರೆದಿದ್ದರೆ ನಿಶ್ಚಿತವಾಗಿ ನಾನು ಮೊದಲು ಮುಂದೆ ನಿಂತುಕೊಂಡು ಮುಖ್ಯಮಂತ್ರಿಗಳ ಜೊತೆ ಹೋಗುತ್ತಿದ್ದೆ.

ಎದುರುಗಡೆ ಆಂಧ್ರ ಪ್ರದೇಶದವರು ಯಾವ ಆರೋಪವನ್ನು ಮಾಡಿದ ಹಿನ್ನಲೆಯಲ್ಲಿ ಈ ಸಭೆ ಕರೆದಾಗ, ಅವರ ಎದುರು ಕುಳಿತುಕೊಂಡು ಮಾತನಾಡಲು ನಾನು ಸಿದ್ಧನಿಲ್ಲ. ನಾವು ಬಿ.ಜೆ.ಪಿ.ಯವರು ಒಂದು ನಿಯೋಗ ಹೋಗುತ್ತೇವೆ. ಪ್ರಧಾನಿಯವರನ್ನು ಭೇಟಿ ಮಾಡುತ್ತೇವೆ. ಮಾತುಕತೆಗೆ ಅವರು ಈಗ ಕುಳಿತುಕೊಂಡಂಥಾದ್ದು ಸರಿಯಲ್ಲ. ನಾವು ಯಾವುದನ್ನೂ ವಯಲೇಟ್ ಮಾಡದೇ ಇದ್ದಾಗ ಅವರಿಗೆ ಛೀಮಾರಿ ಹಾಕಬೇಕಾಗಿತ್ತು. ಹುಷಾರ್, ನಮ್ಮ ಬೆಂಬಲ ಕೊಟ್ಟಿದ್ದೇವೆ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಆಟದ ಗೊಂಬೆಯಾಗಿ ಮಾಡುವುದಕ್ಕೆ ಬಿಡುವುದಿಲ್ಲ. ಇಲ್ಲಿ ಖುರ್ಚಿ ಮುಖ್ಯ ಅಲ್ಲ. ರಾಷ್ಟ್ರದ ಹಿತ ಮುಖ್ಯ, ರಾಜ್ಯದ ಹಿತ ಮುಖ್ಯ ಎಂದು ಅವರು ಹೇಳುತ್ತಾರೆ, ಹೇಳಿಸುತ್ತೇವೆ, ಆ ಸಮಯದಲ್ಲಿ ನಾವು ಹೋಗುತ್ತೇವೆ. ಈ ಸಮಯ ಸೂಕ್ತವಲ್ಲ ಎಂದು ನಾವು ಹೋಗಲಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ವಿರೋಧ ಪಕ್ಷದ ನಾಯಕರೇ, ನಿಮ್ಮ ಇದೇ ವಾಹನವನ್ನು ನಿಮ್ಮ ಮನಸ್ಸಿನಲ್ಲಿ ಏನಾದರೊಂದು ಚೂರು ಸಂಶಯ ಇದ್ದಿದ್ದರೆ, 729 ಟಿ.ಎಂ.ಸಿ. ನೀರನ್ನು ಬಳಸುವುದರಲ್ಲಿ ಎಲ್ಲಾದರೂ ಒಂದು ಕಿಂಚಿತ್ತು ಕೂಡ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎನ್ನುವಂಥ ಭಾವನೆ ನಿಮ್ಮ ಮನಸ್ಸಿನಲ್ಲಿ ಬಂದಿದ್ದರೆ, ಬಹುಶಃ ಇದೇ ವಾಹನವನ್ನು ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳ ಎದುರಿಗೆ.

ಶ್ರೀ ವೈ. ರಾಮಕೃಷ್ಣ : ಕಾನೂನುಬದ್ಧವಾಗಿ ಬಚಾವತ್ ತೀರ್ಪಿನಂತೆ ನಾವು ನಡೆದುಕೊಂಡಿರುವಾಗ ಅವರಿಗೆ ಏಕೆ ಹೇಳಬೇಕು?

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ರಾಜ್ಯದವರ ಭಿಕ್ಷೆ ನಮಗೇನು? ಅವರ ಮುಲಾಜು ನಮಗೆ ಏತಕ್ಕೆ?

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ನಿಯೋಗ ಏಕೆ? ಏಕೆ ಸಭೆ ಮಾಡಬೇಕಾಗಿತ್ತು? ನಿಮ್ಮ ನಿರ್ಧಾರ ಅಚಲವಾಗಿ ಇದ್ದಮೇಲೆ, ಆಲಮಟ್ಟಿ ಎತ್ತರ ಏರಿಸುವ ನಿರ್ಧಾರದ ಮೇಲೆ ಸಭೆ ಏಕೆ ಬೇಕಾಗಿತ್ತು? ಸಭೆಯಿಂದ ಏನು ಪ್ರಯೋಜನ? ಏಕೆ ಹೋಗಬೇಕಾಗಿತ್ತು? ಹೇಳಿ. ನೀವು ಹೆದರಿ ಸಭೆಗೆ ಹೋಗುತ್ತಿದ್ದೀರಿ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಇವರು ಖಂಡಿತವಾಗಿ ಹೆದರಿ ಹೋಗುತ್ತಿದ್ದಾರೆ. ಯಾವ ರೀತಿಯ ಕದ್ದುಮುಚ್ಚು ವ್ಯವಹಾರ ಇಲ್ಲವೇ ಇಲ್ಲ. ಇಲ್ಲಿ ಸ್ಪಷ್ಟವಾಗಿದೆ, ಅವರ ಒಂದು ಒತ್ತಡಕ್ಕೆ ಸಿಕ್ಕಿ ಮಾತುಕತೆಗೆ ಹೋಗುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈ ರಾಜ್ಯವನ್ನು ಬಲಿ ಕೊಡುವುದಕ್ಕೆ ಹೋಗಬೇಡಿ. ದಯಮಾಡಿ ಮತ್ತೆ ಹೇಳುತ್ತಿದ್ದೇನೆ, ಪಕ್ಷಬೇಧ ಮರೆತು ನೀವು. ನಿಮ್ಮ ಶಕ್ತಿಯನ್ನು ಪ್ರದರ್ಶನ ಮಾಡಬೇಕಾಗಿತ್ತು.

ಶ್ರೀ ಎಂ.ಸಿ. ನಾಣಯ್ಯ : ವಾಟಾಳ್‌ರವರೇ, ಶಕ್ತಿಯ ಪ್ರದರ್ಶನ ಯಾವ ರೀತಿಯಲ್ಲಿ ಮಾಡಬೇಕು. ಕೇಳಿ ಸ್ವಾಮಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ರಾಜಕೀಯ ಕಂಪಲ್‌ಷನ್ ಅರ್ಥವಾಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ : ಯಾವ ರಾಜಕೀಯದ ಕಂಪಲ್‌ಷನ್? ಯಾವ ರಾಜಕೀಯದ ಒತ್ತಡ ಎಂದು ಹೇಳಿ. ದೇವೇಗೌಡರು ಪ್ರಧಾನಮಂತ್ರಿ ಆಗಿರತಕ್ಕಂಥಾದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಬೆಂಬಲ ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ ತಕ್ಷಣ ಮಾತುಕತೆಗೆ ಕರೆದಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ : ಈಗ ಒಂದನ್ನು ಹೇಳುತ್ತೇನೆ, ಪ್ರಧಾನಿಗೆ ಕೊಟ್ಟಿರತಕ್ಕಂಥ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳಬೇಕಾಗಿರತಕ್ಕಂಥಾದ್ದು, ಯಾರು ಆ ಬೆಂಬಲವನ್ನು ಕೊಟ್ಟಿದ್ದಾರೆ ಅವರ ವಿವೇಚನೆಗೆ ಬಿಟ್ಟಿರತಕ್ಕಂಥಾದ್ದು. ಆದರೆ ಪ್ರಧಾನಿಗೆ ಕೊಟ್ಟಿರತಕ್ಕಂಥ ಬೆಂಬಲಕ್ಕೂ ಆಲಮಟ್ಟಿ ಕಟ್ಟುವುದಕ್ಕೂ ನೀರು ಸಂಗ್ರಹಣೆಗೂ, 729 ಟಿ.ಎಂ.ಸಿ. ನೀರಿಗೂ ಸಂಬಂಧವಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ಸಂಯುಕ್ತ ರಂಗವನ್ನು ಉಳಿಸುವುದಕ್ಕೆ ಇಲ್ಲಿ ಕರ್ನಾಟಕವನ್ನು ಬಲಿ ಕೊಡುವುದು ಬೇಡ. ಇವತ್ತು ಏಕೆ ತರಾತುರಿಯಲ್ಲಿ ಹೋಗಬೇಕಾಗಿತ್ತು.

(ಗೊಂದಲ)

ಶ್ರೀ ಸಿ.ಹೆಚ್. ವಿಜಯಶಂಕರ್ : ನಮ್ಮ ರಾಜ್ಯಕ್ಕೂ ಆಂಧ್ರ ರಾಜ್ಯಕ್ಕೂ, ಎರಡೂ ಕಡೆ ಮಾರ್ಗದರ್ಶನ ಮಾಡುವುದಕ್ಕೆ.....

ಶ್ರೀ ಸಿದ್ಧರಾಮಯ್ಯ : ನಮ್ಮ ನಿಲುವು ಬಹಳ ಸ್ಪಷ್ಟವಾಗಿದೆ. ಇದರಲ್ಲಿ ಜಿಜ್ಞಾಸೆಯೇ ಇಲ್ಲ, ಇವರು ಸಂಶಯ ಪಡಬೇಕಾದಂಥ ಅಗತ್ಯವಿಲ್ಲ. 729 ಟಿ.ಎಂ.ಸಿ. ನೀರು ಬಚಾವತ್ ತೀರ್ಪಿನ ಪ್ರಕಾರ ನಮಗೆ ಸಿಗಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ವಿಷಯ ಬೇಡ. ಆಲಮಟ್ಟಿ ಎತ್ತರದ ಬಗ್ಗೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಆಲಮಟ್ಟಿಯನ್ನು ಎತ್ತರಿಸುತ್ತೀರೋ ಅಥವ ಇಲ್ಲವೋ ಅದನ್ನು ಹೇಳಿ. ನೀರನ್ನು ಬಳಸಿಕೊಳ್ಳುವ ಪ್ರಶ್ನೆ ಬೇಡ. ಆಲಮಟ್ಟಿ ಬಗ್ಗೆ ನಿಮ್ಮ ನಿರ್ಧಾರ ಏನು? ಸರ್ಕಾರದ ನಿಲುವು ಏನು?

ಶ್ರೀ ಸಿದ್ಧರಾಮಯ್ಯ : ಆಲಮಟ್ಟಿ ಎತ್ತರವನ್ನು ಮಾಡತಕ್ಕಂಥಾದ್ದು, ನಮ್ಮ ನೀರನ್ನು ಬಳಸಿಕೊಳ್ಳುವುದಕ್ಕೋಸ್ಕರ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ತಡೆಯಲು ಇವರು ಯಾರು?

ಶ್ರೀ ಸಿದ್ಧರಾಮಯ್ಯ : ಅದನ್ನು ತಡೆಯಲು ಅವರಿಗೆ ಹಕ್ಕು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ಪ್ರಧಾನಿಯವರು ಹೇಳಬೇಕಾಗಿತ್ತು.

ಶ್ರೀ ಸಿದ್ಧರಾಮಯ್ಯ : ಇದನ್ನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆದ್ದರಿಂದ ಇದರಲ್ಲಿ ನಮ್ಮ ರಾಜ್ಯದ ಅಥವಾ ನಮ್ಮ ಹಕ್ಕನ್ನು ಯಾವ ಕಾರಣಕ್ಕೂ ಬಿಟ್ಟುಕೊಡತಕ್ಕಂಥ ಪ್ರಶ್ನೆಯೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಹಾಗಿದ್ದರೆ ಮಾತುಕತೆ ಬೇಕಾಗಿರಲಿಲ್ಲ.

ಶ್ರೀ ಸಿದ್ಧರಾಮಯ್ಯ : ಅಧಿಕಾರಕ್ಕೋಸ್ಕರ, ಕುರ್ಚಿಗೋಸ್ಕರ ಏನೂ ಇಲ್ಲ. ನಮಗೆ ಗೊತ್ತಿಲ್ಲವೇ? ಜನತಾದಳದವರಿಗೆ ಗೊತ್ತಿಲ್ಲವೇ, 44 ಜನ ಎಂ.ಪಿ.ಗಳನ್ನು ಇಟ್ಟುಕೊಂಡು ಬೇರೆ ಪಕ್ಷಗಳ ಬೆಂಬಲದಿಂದ ಅಧಿಕಾರದಲ್ಲಿದ್ದೇವೆ ಎನ್ನುವುದೂ ಕೂಡ ಗಮನದಲ್ಲಿದೆ. ಕುರ್ಚಿಗೆ ಅಂಟಿಕೊಂಡು ಕುಳಿತುಕೊಳ್ಳಬೇಕು ಎನ್ನುವುದು ಅಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಅಧಿಕಾರಕ್ಕೋಸ್ಕರ ಎಂದು ಹೇಳತಕ್ಕಂಥ ಮಾತುಗಳಲ್ಲಿ ಏನೇನೂ ಹುರುಳಿಲ್ಲ. ನಾನು ಸ್ಪಷ್ಟಪಡಿಸುತ್ತೇನೆ, ಕರ್ನಾಟಕದ ಹಿತವನ್ನು ಬಲಿಕೊಡತಕ್ಕಂಥ ಪ್ರಶ್ನೆಯೇ ಇಲ್ಲ. ಇದು ಜನತಾದಳದವರ ಜಾಯಮಾನ ಅಲ್ಲ. ನೀವು ಅದರ ಬಗ್ಗೆ ಸಂಶಯ ಪಡಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಆಂಧ್ರದ ಮುಖ್ಯ ಮಂತ್ರಿಗೆ ಇದನ್ನು ಕ್ಲಿಯರ್ ಮಾಡಿ ಬಿಟ್ಟಿದ್ದರೆ ಆ ಸಭೆಯ ಆವಶ್ಯಕತೆ ಇರಲಿಲ್ಲ.

ಶ್ರೀ ಸಿದ್ಧರಾಮಯ್ಯ : ಇದರ ಬಗ್ಗೆ ಯಾರೂ ಸಂಶಯ ಪಡಬೇಕಾಗಿಲ್ಲ. ನಿಮಗೇ ಗೊತ್ತಾಗುತ್ತಿತ್ತು, ನಮ್ಮ ನಿಲುವು ಏನು? ಅವರ ಎದುರಿನಲ್ಲಿ ಅಲ್ಲ ಎಷ್ಟರ ಮಟ್ಟಿಗೆ ಸ್ಪಷ್ಟಪಡಿಸುತ್ತೇವೆ ಎನ್ನುವುದು ನಿಮಗೇ ಗೊತ್ತಾಗುತ್ತಿತ್ತು, ನೀವು ಹೋಗಿದ್ದರೆ. ನೀವು ಹೋಗಬೇಕಾಗಿತ್ತು. ಇದರಲ್ಲಿ ರಾಜಿಯಾಗುವ ಪ್ರಶ್ನೆಯೇ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಆಂಧ್ರದ ಮುಖ್ಯಮಂತ್ರಿಗಳ ಮುಲಾಜು ನಮಗೆ ಯಾರಿಗೂ ಇಲ್ಲ. ಇದನ್ನು ಪ್ರತಿಭಟಿಸಿ ಕೇಂದ್ರದ ಮಂತ್ರಿಗಳ ರಾಜೀನಾಮೆ ಕೊಡಬೇಕಾಗಿತ್ತು, ಜಾಲಪ್ಪನವರು ರಾಜೀನಾಮೆ ಕೊಡಬೇಕಾಗಿತ್ತು, ಇಬ್ರಾಹಿಂ ಅವರು ರಾಜೀನಾಮೆ ಕೊಡಬೇಕಾಗಿತ್ತು, ಪ್ರಧಾನಿಗಳು ರಾಜೀನಾಮೆ ಕೊಡಬೇಕಾಗಿತ್ತು.

ಶ್ರೀ ಸಿದ್ಧರಾಮಯ್ಯ : ರಾಜೀನಾಮೆಯನ್ನು ಯಾರು ಕೊಡಬೇಕಾಗುತ್ತದೆ ಎನ್ನುವುದು ಗೊತ್ತಾಗುತ್ತದೆ. ಇಲ್ಲಿ ಕೇಳಿ, ನಮಗೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ತೆಲುಗು ದೇಶದವರಿಗೂ ಕೂಡ ಇದೆ. ಆದ್ದರಿಂದ ದೇವೆಗೌಡರ ಸರ್ಕಾರಕ್ಕೆ ಬೆಂಬಲ ಕೊಡತಕ್ಕಂಥಾದ್ದು, ಬಿಡತಕ್ಕಂಥಾದ್ದು ಅವರ ವಿವೇಚನೆಗೆ ಸೇರಿರತಕ್ಕಂಥಾದ್ದು. ರಾಷ್ಟ್ರದ ಹಿತದೃಷ್ಟಿಯಿಂದ ಅವರು ಬೆಂಬಲ ಕೊಟ್ಟಿರತಕ್ಕಂಥಾದ್ದು. ದೇವೇಗೌಡರು ಪ್ರಧಾನಿಯಾಗಬೇಕು, ಪ್ರಧಾನಿಯಾಗುವುದಕ್ಕೆ ಬಂದಿದ್ದಾರೆ ಎನ್ನುವ ಕಾರಣಕ್ಕೋಸ್ಕರ ಅಲ್ಲ. ಈ ರಾಷ್ಟ್ರವನ್ನು ಉಳಿಸುವುದಕ್ಕೋಸ್ಕರ, ರಾಷ್ಟ್ರದ ಹಿತದೃಷ್ಟಿಯಿಂದ ಎಲ್ಲಾ 14 ಪಕ್ಷಗಳೂ ಕೂಡ ದೇವೇಗೌಡರಿಗೆ ಬೆಂಬಲ ಕೊಟ್ಟಿರತಕ್ಕಂಥಾದ್ದು. ಆದ್ದರಿಂದ ಆಲಮಟ್ಟಿ ವಿಚಾರಕ್ಕೂ, ದೇವೇಗೌಡರಿಗೆ ಬೆಂಬಲ ಕೊಟ್ಟಿರುವುದಕ್ಕೂ ಏನೇನೂ ಸಂಬಂಧವಿಲ್ಲ.

ಮಾನ್ಯ ಸದಸ್ಯರು : ಉತ್ತರ ಕುಮಾರರು ನಮ್ಮ ರಾಜ್ಯವನ್ನು ಆಳುತ್ತಿದ್ದಾರೆ. ಅಸೆಂಬ್ಲಿಯೊಳಗೆ ಮಾತ್ರ ಇದರ ಘೋಷಣೆ. ಕೇಂದ್ರದಲ್ಲಿ ನಿಂತು ಈ ಮಾತನ್ನು ಹೇಳುತ್ತಿಲ್ಲ.

ಶ್ರೀ ಸಿದ್ಧರಾಮಯ್ಯ : ಇನ್ನೊಂದು ಮಾತನ್ನು ನಾನು ಸ್ಪಷ್ಟಪಡಿಸಲಿಕ್ಕೆ ಇಚ್ಛಿಸುತ್ತೇನೆ. 800 ಕೋಟಿ ರೂಪಾಯಿ ಬಜೆಟ್ಟಿನಲ್ಲಿ ಇಟ್ಟಿರತಕ್ಕಂಥ ಹಣ ಏನಿದೆ, ಅದು ಕರ್ನಾಟಕಕ್ಕೆ ಕೊಡತಕ್ಕಂಥ ಭಿಕ್ಷೆ ಏನಲ್ಲ. ದೇವೇಗೌಡರ ಬಜೆಟ್ಟಿನಲ್ಲಿ ಸುಮಾರು 6 ಯೋಜನೆಗಳಿದ್ದು,

ಯಾವ್ಯಾವುವು ಒಂದು ಸಾವಿರ ಕೋಟಿ ರೂಪಾಯಿಗಿಂತ ಹೆಚ್ಚು ಇರತಕ್ಕಂಥಾದ್ದು ಇವೆ, ಇದು ಆ ಆರೂ ಯೋಜನೆಗಳಿಗೂ ಸಹಾಯ ಆಗತಕ್ಕಂಥಾದ್ದು, ಕರ್ನಾಟಕ ಒಂದಕ್ಕೇ ಸೇರಿತಕ್ಕಂಥಾದ್ದು ಅಲ್ಲ. It is a soft loan, it is not a grant.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಒಂದು ಮಾತು. ನಾಣಯ್ಯನವರೇ, ಸನ್ಮಾನ್ಯ ಅಧ್ಯಕ್ಷರು ಒಂದು ಮಾತು ಹೇಳಿದರು, ಎಂದು ಸಹ ಪ್ರಧಾನಿಯವರು ಈಗಾಗಲೇ 200 ಕೋಟಿ ಕೊಟ್ಟಿದ್ದೇವೆ ಎಂದು ಹೇಳಿಲ್ಲ, ಅದು ಆ ಒಂದು ಯೋಜನೆಗಳಿಗೆ ಅಲೋಕೇಷನ್ ಮಾಡಿರುವಂಥ ಮೊತ್ತ, ಎಂದು. ಇಲ್ಲ ನಮ್ಮದು ಎರಡು ತಪ್ಪು ಆಯಿತು. ಒಂದು ಸನ್ಮಾನ್ಯ ನೀರಾವರಿ ಸಚಿವರು ಮಂಜೂರಾದ ಹಣ ಬರುವುದಕ್ಕೆ ಮುಂಚೆಯೇ 200 ಕೋಟಿ ಬಂತು, ಬಂತು ಎಂದು ಬೊಬ್ಬೆ ಹೊಡೆಯುವ ಅಗತ್ಯ ಇರಲಿಲ್ಲ, ಅದನ್ನು ಜಗಜ್ಜಾಹೀರು ಮಾಡುವ ಅಗತ್ಯವಿರಲಿಲ್ಲ. ಎರಡನೆಯದ್ದು, ಆಂಧ್ರದ ಮುಖ್ಯಮಂತ್ರಿ 200 ಕೋಟಿ ರೂಪಾಯಿ ಕೊಡುತ್ತೇನೆ ಎಂದು ಕೂಗಿದಾಗ, ನಾವು ಕೊಟ್ಟಿಲ್ಲ, ಕೊಟ್ಟಿಲ್ಲ ಎಂದು ಪ್ರಧಾನಿಯವರು ಹೇಳುವ ಅಗತ್ಯವಿರಲಿಲ್ಲ ಮತ್ತು ಮೂರನೆಯದು ನಮ್ಮ ರಾಜ್ಯದ ಜನ ಪ್ರತಿನಿಧಿಗಳಾದ ಕೇಂದ್ರದ ಸಚಿವರಾಗಿರುವಂಥ ನಮ್ಮ ಜನ, ಆಂಧ್ರದ ಮುಖ್ಯಮಂತ್ರಿ ಆ ರೀತಿ ನಾವು ಬೆಂಬಲ ವಾಪಸ್ಸು ತೆಗೆದುಕೊಳ್ಳುತ್ತೇವೆ ಎಂದು ಹೇಳಿದಾಗ ಇದನ್ನು ಪ್ರತಿಭಟನೆ ಮಾಡಿ ಒಂದು ಹೇಳಿಕೆ ಕೊಡಬೇಕಾಗುತ್ತಲ್ಲಾ. ಇಲ್ಲದಿದ್ದರೆ ಈ ನಾಡಿನ ಜನ ನಿಮ್ಮನ್ನು ಎಂ.ಪಿ.ಗಳಾಗಿ ಮಾಡದಿದ್ದರೆ ಅಲ್ಲಿ ನೀವು ಮಂತ್ರಿಗಳು ಆಗುತ್ತಿದ್ದಿರೇನು? ಎಂ.ಪಿ.ಗಳಾದಮೇಲೆ, ಮಂತ್ರಿಗಳಾದಮೇಲೆ, ರಾಜ್ಯದ ಹಿತ ನಿಮಗೆ ಬೇಡ. ರಾಜ್ಯದಿಂದ ಹೋಗಿರುವಂಥ ಒಬ್ಬ ಕೇಂದ್ರದ ಮಂತ್ರಿ ಇದನ್ನು ಪ್ರತಿಭಟಿಸಲಿಲ್ಲ, ಒಂದು ಹೇಳಿಕೆ ಕೊಡಲಿಲ್ಲ, ಮೌನವಾಗಿದ್ದರು. ಏಕೆಂದರೆ ಇವರಿಗೆ ಕುರ್ಚಿ ಮುಖ್ಯ ಸ್ಥಾನ ಮುಖ್ಯ. ಇದು ಸರಿಯೇ ಎಂದು ಕೇಳುತ್ತಿದ್ದೇನೆ.

(ಗೊಂದಲ)

ಮಾನ್ಯ ಸದಸ್ಯರು : ಇವರಿಗೆ ಕುರ್ಚಿಯೇ ಸರ್ವಸ್ವ. ರಾಜ್ಯದ ಹಿತ ಮುಖ್ಯವಲ್ಲ, ಜನತೆಯ ಹಿತ ಮುಖ್ಯವಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದಕ್ಕಿಂತ ಬೇರೆ ಬೇಕೇ ಸ್ವಾಮಿ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇಲ್ಲಿ ಕುಳಿತುಕೊಂಡು.

ಶ್ರೀ ಸಿದ್ಧರಾಮಯ್ಯ : ಇವರು ಕುರ್ಚಿ, ಕುರ್ಚಿ ಎಂದು ಅದೇ ಕನಸು ಕಾಣುತ್ತಿದ್ದಾರೆ. ಈ ಕುರ್ಚಿ ಅಲ್ಲ, ಇವರಿಗೆ ಮಾತೆತ್ತಿದರೆ ಕುರ್ಚಿ.

ಮಾನ್ಯ ಸದಸ್ಯರು : ಅದಕ್ಕೆ ಪರ್ಯಾಯ ಶಬ್ದ ಬೇರೆ ಯಾವುದೂ ಗೊತ್ತಿಲ್ಲ ನಮಗೆ. ಅದನ್ನೇ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಳು ಜನ್ಮದ ಪುಣ್ಯದ ಫಲ, ಇವತ್ತು ಇಲ್ಲಿ ವಿರೋಧ ಪಕ್ಷದ ನಾಯಕನಾಗಿ ಜನರ ಸೇವೆ ಮಾಡುವಂಥ ಅವಕಾಶ ಸಿಕ್ಕಿದೆ. ಅಷ್ಟು ಸಾಕು ನಮಗೆ. I am happy. ಇದನ್ನು ಪ್ರಾಮಾಣಿಕವಾಗಿ ಯಾವುದೇ ಮುಲಾಜಿಗೆ ಒಳಗಾಗದೇ ಮಾಡುತ್ತೇನೆ ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಆ ಜನತಾದಳದವರು ಆಡಳಿತಕ್ಕೆ ಬಂದ ಮೇಲೆ ಕೆಟ್ಟುಹೋಗಿದ್ದಾರೆ. ಆಡಳಿತ ಸಿಗುವುದಕ್ಕೆ ಮುಂಚೆ ಚೆನ್ನಾಗಿ

ಇದ್ದರು, ಈಗ ಕೆಟ್ಟುಹೋಗಿದ್ದಾರೆಂದು ನಾವು ಹೇಳುತ್ತಿರುವುದು. ಈಗ ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಿಗೆ ಹೆದರಿ ಸಂಯುಕ್ತ ರಂಗ ಸರ್ಕಾರವನ್ನು ಉಳಿಸಿಕೊಳ್ಳುವುದಕ್ಕೆ ಹೊರಟಿದ್ದಾರೆ ಎನ್ನುವ ಮಾತನ್ನು ಬಿಟ್ಟು ಬೇರೆ ಮಾತು ಇಲ್ಲ.

ಶ್ರೀ ಸಿ.ಹೆಚ್. ವಿಜಯಶಂಕರ್ : ಮಾನ್ಯ ಸಭಾಧ್ಯಕ್ಷರೆ, ನಮಗೆ ಮತ್ತು ಆಂಧ್ರಪ್ರದೇಶಕ್ಕೆ ಎರಡೂ ರಾಜ್ಯಕ್ಕೆ ಮಾರ್ಗದರ್ಶನ ಮಾಡುವುದಕ್ಕೆ ಬಚಾವತ್ ತೀರ್ಪು ಇದೆ. ಈ ಯೋಜನೆಗೆ ಈಗಾಗಲೇ ಪ್ಲಾನಿಂಗ್ ಕಮಿಷನ್‌ನಿಂದ ಅಪ್ರೂವಲ್ ಆಗಿದೆ. ಈ ವಿಚಾರದಲ್ಲಿ ಹೊಸದಾಗಿ ಚರ್ಚೆ ಮಾಡತಕ್ಕಂಥದ್ದು ಯಾವುದೇ ಅಗತ್ಯವಿಲ್ಲ. ಆದರೆ ರಾಜ್ಯದ ಮುಖ್ಯಮಂತ್ರಿಗಳು ಕೇಂದ್ರಕ್ಕೆ ಏಕೆ ಹೋಗಿದ್ದಾರೆ ಎನ್ನುವುದನ್ನು ಮಾನ್ಯ ಕಾನೂನು ಸಚಿವರು ಸ್ಪಷ್ಟಮಾಡಬೇಕಾಗುತ್ತದೆ. ಇದು ಏನೂ ಹೊಸ ವಿಚಾರ ಅಲ್ಲ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರು ಹೇಳುವುದನ್ನು ಹೇಳಿ ಆಯಿತು. ನಾವು ವಾಸ್ತವವಾಗಿ ಇರತಕ್ಕಂಥ ವಿಚಾರವನ್ನು ಹೇಳಿದ ಮೇಲೆ ನಿಮ್ಮ ರಾಜಕಾರಣದ ಮಾತಿಗೂ ನಾವು ಉತ್ತರವನ್ನು ಕೊಡಬೇಕಾಗಿದೆ. ನಿಜ, ವಿರೋಧ ಪಕ್ಷದವರು ಗಂಭೀರವಾಗಿರತಕ್ಕಂಥ ಚಿಂತನೆಯನ್ನು ಈ ಸದನದಲ್ಲಿ ಪ್ರತಿಪಾದನೆ ಮಾಡಿದ್ದಾರೆ. ಗಂಭೀರವಾಗಿರತಕ್ಕಂಥ ನಿಮ್ಮ ಚಿಂತನೆ ಯಾವುದು ನೀವು ಪ್ರತಿಪಾದನೆ ಮಾಡಿದಿರಿ ಆ ಚಿಂತನೆಯನ್ನು ತಾವು ದೆಹಲಿಗೆ ಹೋಗಿ ಆ ಮಾತುಕತೆಯಲ್ಲಿ ಕುಳಿತು ಚರ್ಚೆ ಮಾಡಿ ಅಲ್ಲಿ ಎಲ್ಲಿಯಾದರೂ ನಿಮ್ಮ ಗಂಭೀರವಾದುದಕ್ಕೆ ಏನಾದರೂ ಕಿಂಚಿತ್ತು ಸಮಾಧಾನ ದೊರಕುತ್ತಿದ್ದರೆ..... ನಿಮ್ಮ ಗಂಭೀರವಾಗಿರತಕ್ಕಂಥ ಚಿಂತನೆಯನ್ನು ಪ್ರತಿಪಾದನೆ ಮಾಡಿದಿರಿ. ಈ ಒಂದು ಮೀಟಿಂಗ್‌ನಲ್ಲಿ ನಮ್ಮ ರಾಜ್ಯವನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸತಕ್ಕಂಥ ಒಂದು ಪ್ರಯತ್ನವೇ ನಡೆದಿದೆ. ಅಲ್ಲಿ ಆ ಮೀಟಿಂಗ್‌ನ್ನು ಕರೆದಿರತಕ್ಕಂಥದ್ದು ಎಲ್ಲೋ ಒಂದು ಕಡೆ ತಾವು ಕುರ್ಚಿಯನ್ನು ಭದ್ರ ಮಾಡಿಕೊಳ್ಳುವುದಕ್ಕೆ, ನಮ್ಮ ಮಂತ್ರಿಗಳು, ಮುಖ್ಯಮಂತ್ರಿಗಳು ಇವತ್ತು ಹೋಗಿ ಪ್ರಧಾನ ಮಂತ್ರಿಗಳ ಕುರ್ಚಿಯನ್ನು ಭದ್ರ ಮಾಡಲಿಕ್ಕೆ ಇರತಕ್ಕಂಥದ್ದಕ್ಕೆ ಒಂದು ಸಂಚು ನಡೆದು ರಾಜ್ಯ ಜನರ ಹಿತವನ್ನು ಇವರು ಬಲಿ ಕೊಟ್ಟಿದ್ದಾರೆಂದು ಹೇಳುತ್ತಿರತಕ್ಕಂಥದ್ದು ನಿಮ್ಮ ಅನಿಸಿಕೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ಮಾನ್ಯ ಅಧ್ಯಕ್ಷರೆ, ನಾವು ಈ ವಿಚಾರದಲ್ಲಿ ಸರ್ಕಾರಕ್ಕೆ ಬೆಂಬಲ ಕೊಡಬೇಕೆಂದು ಹೇಳುವುದಾದರೆ ವಿರೋಧ ಪಕ್ಷಗಳನ್ನು ಸಭೆಗೆ ಆಹ್ವಾನ ಮಾಡಿದ್ದೀರೋ ಅವರ ಸಲಹೆಯನ್ನು ಕೇಳಿಲ್ಲ, ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಯಡಿಯೂರಪ್ಪನವರ ಮನಸ್ಸಿನ ಆತಂಕ, ಮನಸ್ಸಿನಲ್ಲಿರತಕ್ಕಂಥ ಸಂಶಯ ಇವೆಲ್ಲವೂ ಕೂಡ ರಾಜ್ಯದ ಜನರ ಹಿತವನ್ನು ಕಾಪಾಡುವುದಕ್ಕೋಸ್ಕರ ಎಂದು ನಾನು ಅಂದುಕೊಳ್ಳುತ್ತೇನೆ. ಕೃಷ್ಣ ಜಲಾನಯನ ಪ್ರದೇಶದಲ್ಲಿರತಕ್ಕಂಥ ರೈತರಿಗೆ ಯಾವುದೇ ಸಂದರ್ಭದಲ್ಲೂ ಕೂಡ ನಮ್ಮ ನದಿ ನೀರಿನ ಬಳಕೆಯಲ್ಲಿ ಈ ಮೀಟಿಂಗ್‌ನಿಂದ ಬಳಕೆಯ ಉಲ್ಲಂಘನೆ ತೊಂದರೆಯಾಗಬಾರದು ಎಂಬುದು ನಿಮ್ಮ ಚಿಂತನೆ ತಾನೆ? ಆ ಚಿಂತನೆಗೆ ಒಳಪಟ್ಟೇ ಇವತ್ತು ಒಂದು ಸಭೆಯನ್ನು ಕರೆದಿದ್ದಾರೆ. ಪ್ರಧಾನಿಯಾಗಿ

ಕುಳಿತಿರತಕ್ಕಂಥದವರಿಗೆ 729 ಟಿಎಂಸಿ ನೀರನ್ನು ಉಪಯೋಗಿಸುವುದಕ್ಕೆ ನಿಮಗೆ ಅಧಿಕಾರವಿಲ್ಲವೆಂದು ಹೇಳತಕ್ಕಂಥ ಅಧಿಕಾರ ಅವರಿಗೆ ಇಲ್ಲ, ಆಂಧ್ರ ಪ್ರದೇಶದಲ್ಲಿರತಕ್ಕಂಥ ಅವರ ನದಿ ನೀರಿನ ಉಪಯೋಗಿಸುವುದಕ್ಕೆ ಆಗುವುದಿಲ್ಲವೆಂದು ಹೇಳಲಿಕ್ಕೆ ಅವರಿಗೂ ಅಧಿಕಾರ ಇಲ್ಲ.

ಪ್ರಧಾನಿಯಾಗಿ ಅವರು ಬಚಾವತ್ ಅವಾರ್ಡ್‌ನ ಅಡಿಯಲ್ಲಿ ಆಂಧ್ರಪ್ರದೇಶಕ್ಕೆ, ಕರ್ನಾಟಕಕ್ಕೆ, ಮಹಾರಾಷ್ಟ್ರಕ್ಕೆ ಎಷ್ಟು ನೀರನ್ನು ಕೊಟ್ಟಿದ್ದಾರೆ ಆ ನೀರಿನ ಪಾಲಿನ ಅಡಿಯಲ್ಲ 3 ರಾಜ್ಯಗಳಿಗೂ ಕೂಡ ಅಧಿಕಾರ ಇದೆಯೆಂದು ಆ ಮಾತನ್ನು ಹೇಳಲೇಬೇಕು ತಾನೇ ಪ್ರಧಾನಿಗಳು. ಹಾಗಾದರೆ ಇಂದು ಅವರು ಕರೆದಂಥ ಸಭೆ ಏಕೆಂದರೆ ಯಾವುದೇ ಒಂದು ಸಂದರ್ಭದಲ್ಲಿ ಆಲಮಟ್ಟಿ, ಕೃಷ್ಣಾ ನದಿ ನೀರಿನ ಹಂಚಿಕೆಯಲ್ಲಿ ಅಥವಾ ಸಂಗ್ರಹಣೆಯಲ್ಲಿ ಅಥವಾ ಶೇಖರಣೆಯಲ್ಲಿ ಎಲ್ಲಾ ರಾಜ್ಯಗಳ ಮಧ್ಯೆ ಸ್ವಲ್ಪ ಮಟ್ಟಿಗೆ ಭಿನ್ನಾಭಿಪ್ರಾಯ ಬಂದಿದೆ. ಈ ಭಿನ್ನಾಭಿಪ್ರಾಯವನ್ನು ಬಗೆಹರಿಸಲಿಕ್ಕೆ ಪ್ರಧಾನಿಗಳು ಮಾತುಕತೆಗೆ ಕರೆದಿದ್ದಾರೆ. ಈ ಮಾತುಕತೆಗೆ ಕರೆದಿರತಕ್ಕಂಥ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಗಳು ಹೋಗಿದ್ದಾರೆ. ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು ಬಂದಿದ್ದಾರೆ. ಪ್ರಧಾನಿಗಳ ಸಮ್ಮುಖದಲ್ಲಿ ಈ ಸಭೆ ನಡೆಯುತ್ತದೆ. ಈ ಒಂದು ನೀತಿಯನ್ನು ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ತಂದಿದ್ದಾರೆ, ರಾಜ್ಯವನ್ನೇ ಎಲ್ಲೋ ಒಂದು ಕಡೆ ಇಕ್ಕಟ್ಟಿನಲ್ಲಿ ಸಿಕ್ಕಿಸುವುದಕ್ಕೋಸ್ಕರ ರಾಜ್ಯದ ಜನರ ಹಿತವನ್ನು ಬಲಿ ಕೊಡುವುದಕ್ಕೋಸ್ಕರ ಎಂದು ಯಾವುದನ್ನು ಪ್ರತಿಪಾದನೆ ಮಾಡಿದಿರಿ, ಆ ಸಭೆಯಲ್ಲಿ ಭಾಗವಹಿಸಿ ಆದಮೇಲೆ ಆ ಸಭೆಯಲ್ಲಿ ಎಲ್ಲಾದರೂ ಒಂದು ಅನಿಸಿಕೆ ಬಂದಿದ್ದರೆ, ಪ್ರಧಾನಿಗಳು ಮತ್ತು ನಮ್ಮ ಮುಖ್ಯಮಂತ್ರಿಗಳ ವರ್ತನೆಯಿಂದ ರಾಜ್ಯದ ಜನರ ಹಿತವನ್ನು ಅವರು ಕಾಯುವುದಿಲ್ಲವೆಂದು ಹೇಳತಕ್ಕಂಥದ್ದು ನಿಮ ಮನಸ್ಸಿಗೆ ಬಂದಿದ್ದರೆ ಬಹುಶಃ ಇವತ್ತು ಆಡಿರತಕ್ಕಂಥ ಮಾತನ್ನು ನೀವು ನಾಡಿದ್ದು ಸೋಮವಾರ ಆಡಬಹುದಾಗಿತ್ತು.

ಆದರೆ ಇವತ್ತು ಅಲ್ಲಿ ಏನು ಚರ್ಚೆಯಾಗುತ್ತಿದೆ ಎಂದು ಹೇಳುತ್ತಾರೆ ಅದು ಏನು ಎಂದು ಗೊತ್ತಿಲ್ಲ, ಅವರು ಸಭೆಯನ್ನು ಕರೆದಿದ್ದಾರೆ. ಬಹುಶಃ ಮುಂದೆ ಆಗಬಹುದಾಗಿರತಕ್ಕಂಥದ್ದಕ್ಕೆ ನೀವು ಮನಸ್ಸಿನಲ್ಲಿಯೇ ವ್ಯಾಪಕವಾಗಿ ಚರ್ಚೆ ಮಾಡಿ, ಪುನಃ ಪುನಃ ಎಲ್ಲೋ ಕಾಣದೆ ಇರತಕ್ಕಂಥ ವಿಚಾರವನ್ನು ಕಣ್ಣಲಿ ಕಂಡು ಇವತ್ತು ಕುರ್ಚಿಯನ್ನು ಕಾಪಾಡುವುದಕ್ಕೋಸ್ಕರ ಎಂದು ನೀವು ಪ್ರತಿಪಾದನೆ ಮಾಡಿದಿರಿ. ಮಾತುಕತೆಗೆ ನಿಮಗೆ ಆಹ್ವಾನ ಕೊಟ್ಟಿರತಕ್ಕಂಥದ್ದಕ್ಕೆ ನೀವು ಬರುವುದಿಲ್ಲವೆಂದು ಹೇಳಿದಿರಿ. ಅದು ನಿಮಗೆ ಬಿಟ್ಟ ವಿಷಯ ಈ ರಾಜ್ಯದ ಹಿತವನ್ನು ಕಾಯಲಿಕ್ಕೆ ಇರತಕ್ಕಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಪ್ರಧಾನಿಗಳ ಜೊತೆಯಲ್ಲಿ ಚರ್ಚೆಗೆ ಹೋದಂಥ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರನ್ನು ಸಹ ಕರೆದಾಗ, ನೀವು ಅಲ್ಲಿಗೆ ಹೋಗುವುದಿಲ್ಲವೆಂದು ಹೇಳಿ ಅವರಿಗೆ ಒಂದು ಪತ್ರವನ್ನು ಬರೆದಿದ್ದೀರಿ.

ನೀವು ಮುಖ್ಯಮಂತ್ರಿಗಳ ಜೊತೆಗೆ ಪ್ರಧಾನಿಯವರಲ್ಲಿಗೆ ಹೋಗಿ ಚರ್ಚೆ ಮಾಡಿ ಆದಮೇಲೆ ನಿಮ್ಮ ಮನಸ್ಸಿಗೆ ಆತಂಕ, ಸಂಶಯ ಬಂದಿದ್ದರೆ ಬಹುಶಃ ನೀವು ಇವತ್ತು ಆಡಿರತಕ್ಕಂಥ ಮಾತಿಗೆ ಸ್ವಲ್ಪ ಪುಷ್ಟಿ, ಸಮರ್ಥನೆ ಬರುತ್ತಿತ್ತು. ಅದು ಇಲ್ಲದೇ ಇರುವುದರಿಂದ ನೀವು ಆಡಿರತಕ್ಕಂಥ ಮಾತನ್ನು ನಾವು ಇವತ್ತು ಅಂದರೆ ಸರ್ಕಾರ ಯಾವ ದೃಷ್ಟಿಕೋನದಲ್ಲಿ ನೋಡಬೇಕೆಂದರೆ, ಕೇವಲ ರಾಜಕಾರಣದ ದೃಷ್ಟಿಕೋನದಲ್ಲಿ ನೋಡಬೇಕೇ ಹೊರತು ಇದರಲ್ಲಿ ಇನ್ನೂ ಯಾವುದೇ ಇಲ್ಲ, ಕಾವೇರಿ ಮತ್ತು ಕೃಷ್ಣಾ ಇದರ ಬಗ್ಗೆ ಯಾವುದೋ ಚರ್ಚಾ ವಸ್ತು, ಕಥಾ

ವಸ್ತುವನ್ನಾಗಿ ಮಾಡಿಕೊಂಡು ಸದನದಲ್ಲಿ ಇದನ್ನು ಪ್ರಸ್ತಾಪಮಾಡುವುದರ ಮುಖಾಂತರ ರಾಜ್ಯದ ಜನತೆಯಲ್ಲಿ ಏನೋ ಒಂದು ಭಾವನೆಯನ್ನು ಮೂಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಈ ರೀತಿಯ ಪ್ರಯತ್ನ ಇಲ್ಲಿ ಆಗುವುದಿಲ್ಲ, ಇದು ನಡೆಯುವುದಿಲ್ಲ. ಕೃಷ್ಣಾ ನದಿ ನೀರಿನ ಹಂಚಿಕೆ. ಕಾವೇರಿ ನದಿ ನೀರಿನ ಹಂಚಿಕೆ ಬಗ್ಗೆ ವಿರೋಧ ಪಕ್ಷದ ಸದಸ್ಯರ ಚಿಂತನೆ ಏನೆಂದರೆ ಇದನ್ನು ರಾಜಕೀಯವಾದಿ ಬಳಸಿಕೊಂಡು ಪುನಃ ಈ ಕುರ್ಚಿಗೆ ಬರಲಿಕ್ಕೆ ಒಂದು ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ಕುರ್ಚಿಯನ್ನು ಏನಾದರೂ ಮಾಡಿ ಕಿತ್ತುಹಾಕಿ ಆ ಕುರ್ಚಿಗೆ ಬರಬೇಕು ಎನ್ನತಕ್ಕಂಥ ರಾಜಕೀಯದ ಪ್ರಯತ್ನವೇ ಹೊರತು, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು ಇವತ್ತು ದೆಹಲಿಯಲ್ಲಿ ಪ್ರಧಾನಿಯಾಗಿ ಕುಳಿತಿದ್ದಾರೆ. ಅವರನ್ನು ಏನಾದರೂ ಮಾಡಿ ಕುರ್ಚಿಯಿಂದ ಕಿತ್ತುಹಾಕಬೇಕೆಂದು ಹೇಳುತ್ತಿರತಕ್ಕಂಥ ಈ ರಾಜಕೀಯ ಕುತಂತ್ರದಲ್ಲಿ ನೀವು ಸಫಲತೆಯನ್ನು ಕಾಣಲಾರಿರಿ. ಈ ರಾಜ್ಯದ ಜನತೆಯನ್ನು ನಿಮ್ಮಿಂದ ಏನೂ ಮೋಸ ಮಾಡುವುದಕ್ಕಾಗುವುದಿಲ್ಲ. ಕೃಷ್ಣಾ ಮತ್ತು ಕಾವೇರಿ ಜಲಾಶಯದ ಪ್ರದೇಶಗಳಲ್ಲಿರತಕ್ಕಂಥ ರೈತರನ್ನು ನಿಮ್ಮಿಂದ ಮೋಸಮಾಡುವುದಕ್ಕಾಗುವುದಿಲ್ಲ. ವಿರೋಧ ಪಕ್ಷದ ಸದಸ್ಯರುಗಳು ಏನು, ಹೇಗೆ? ಎನ್ನತಕ್ಕಂಥದ್ದನ್ನು ಆ ರೈತರು ತಿಳಿದುಕೊಂಡು ಬಿಟ್ಟಿದ್ದಾರೆ.

ಇದರಿಂದ ಇನ್ನೂ ಕೂಡ ನೀವು ಪಾಠ ಕಲಿಯದೇ ಹೋದರೆ ಬಹುಶಃ ನಾಳೆ ಯಾವುದಾದರೂ ಒಂದು ಕಾಲ ಬಂದಾಗ, ರಾಜ್ಯದ ಜನತೆ ನಿಮಗೆ ಈಗಾಗಲೇ ಪಾಠ ಕಲಿಸಿದ್ದಾರೆ. ಇನ್ನೂ ಪಾಠ ಕಲಿಸುವುದಕ್ಕೆ ಬೇಕಾದಷ್ಟು ಅವಕಾಶಗಳು ಇವೆ. ದಯವಿಟ್ಟು ಕೃಷ್ಣಾ ಕಾವೇರಿ ಬಗ್ಗೆ ಕೇವಲ ರಾಜಕಾರಣ ಮಾಡಬೇಡಿ. ರಾಜ್ಯದ ಹಿತವನ್ನು ಕಾಪಾಡಲು ನಾವೆಲ್ಲ ಒಟ್ಟಾಗಿ ಹೋಗಬೇಕಾಗುತ್ತದೆ. ಆದರೆ ರಾಜ್ಯದ ಜನರ ಹಿತ ನಿಗೆ ಮುಖ್ಯವಲ್ಲ, ನಿಮಗೆ ಈ ಕುರ್ಚಿ ಮೇಲೆ ಇರತಕ್ಕಂಥ ಕಣ್ಣೇ ಮುಖ್ಯವೇ ಹೊರತು ಬಾಕಿ ಯಾವುದೇ ಅಲ್ಲ ಎನ್ನುವುದನ್ನು ನೇರವಾಗಿ ಹೇಳುತ್ತಿದ್ದೇನೆ. ಇನ್ನು ಮುಂದೆ ಈ ತರಹದ ರಾಜಕೀಯದ ಮಾತುಗಳನ್ನಾಡುವುದನ್ನು ನಿಲ್ಲಿಸಿ. ನಾನು ನಿಮಗೆ ಬುದ್ಧಿವಾದವನ್ನು ಹೇಳಲಿಕ್ಕೆ. ಆಗುವುದಿಲ್ಲ. ನಿಜ, ವಿರೋಧ ಪಕ್ಷದಲ್ಲಿ ನೀವು ಇದ್ದಾಗ ರಾಜಕಾರಣವನ್ನು ಮಾಡದೇ ಹೋದರೆ ನೀವು ವಿರೋಧ ಪಕ್ಷದಲ್ಲಿ ಇದ್ದು ಏನು ಪ್ರಯೋಜನವೆಂದು ಜನ ಕೇಳುತ್ತಾರೆ ಅಲ್ಲವೆ? ಜನ ಕೇಳುವುದಿಲ್ಲ, ನಿಮ್ಮ ಪಾರ್ಟಿಯವರು ಕೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರು ಅವರ ಸರ್ಕಾರ ಆಡಳಿತಕ್ಕೆ ಬಂದಿರುವುದರಿಂದ ಈ ರೀತಿ ಮಾತನಾಡುತ್ತಿದ್ದಾರೆ. ಅವರು ವಿರೋಧ ಪಕ್ಷದ ನಾಯಕರು ಆಗಿದ್ದಾಗ ಮತ್ತೊಂದು ಪಾತ್ರ ಮಾಡುತ್ತಿದ್ದರು. ಈಗ ಆಡಳಿತ ಪಕ್ಷಕ್ಕೆ ಬಂದ ಮೇಲೆ ಇನ್ನೊಂದು ಪಾತ್ರ ಮಾಡುತ್ತಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ವಾಟಾಳ್ ನಾಗರಾಜ್‌ರವರು ಯಾವ ಕಾಲಕ್ಕೂ ಕೂಡ ಹೋರಾಟವನ್ನೇ ಮಾಡಿಕೊಂಡು ಬಂದಿರುವವರು. ಇದನ್ನು ನಾನು ನೇರವಾಗಿ ಹೇಳುತ್ತಿದ್ದೇನೆ. ಇವರಿಗೆ ಕುರ್ಚಿ ಮೇಲೆ ಆಸೆ ಇಲ್ಲ, ಆದರೆ ರಾಜ್ಯದ ಜನತೆಯಲ್ಲಿರತಕ್ಕಂಥ ಹಲವಾರು ವಿಚಾರಗಳನ್ನು ಪ್ರತಿನಿಧಿಸಿ ಹೋರಾಟ ಮಾಡಿಕೊಂಡು ವಾಟಾಳರು ಬಂದಿದ್ದಾರೆ. ನಿಮ್ಮ ವಿಚಾರಧಾರೆಯೇ ಬೇರೆ ಎಂದು ನಾನು ತಿಳಿದುಕೊಂಡಿದ್ದೇನೆ. ನೀವು ಯಾವ ಕಾಲಕ್ಕೂ ಅಧಿಕಾರಕ್ಕೋಸ್ಕರ ರಾಜಕೀಯದಿಂದ ಈ ಕುರ್ಚಿಗೋಸ್ಕರ ಆಸೆ ಪಟ್ಟವರಲ್ಲ. ಆದರೆ ಬಾಕಿ ಇರತಕ್ಕಂಥ ರಾಜಕೀಯ ಪಕ್ಷಗಳಲ್ಲಿ ಯಾರು ಇದ್ದಾರೆ, ಅವರಿಗೆ ಕುರ್ಚಿ ಬೇಕು, ರಾಜಕೀಯದಿಂದ ಒಂದು

ಆಸರೆ ಬೇಕು, ರಾಜಕೀಯದ ಆಸೆ, ಸ್ವಾರ್ಥ ಇದೆ. ಅದು ನಿಮ್ಮಲ್ಲಿ ಇಲ್ಲ, ಅದೇ ನಿಮಗೂ ಮತ್ತು ಅವರಿಗೆ ಇರುವ ವ್ಯತ್ಯಾಸ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರು ವಿರೋಧ ಪಕ್ಷದ ಸದಸ್ಯರನ್ನು ಒಡೆದು ಆಳುವಂಥ ನೀತಿಯನ್ನು ಅನುಸರಿಸುತ್ತಿದ್ದಾರೆ. ಇದು ಸರಿಯಲ್ಲ, ಇದು ಆಡಳಿತ ಪಕ್ಷದಿಂದ ಈ ನೀತಿ ಬರಬಾರದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈಗ ನಮ್ಮ ನಮ್ಮಲ್ಲಿ ಒಡಕು ತರತಕ್ಕಂಥ ನೀತಿ ಸನ್ಯಾಸ್ಯ ನಾಣಯ್ಯನವರಿಂದ ಬೇಡ. ಆ ಪ್ರಶ್ನೆಯನ್ನು ಬಿಟ್ಟುಬಿಡಿ. ನಾವು ಈ ವಿಚಾರದಲ್ಲಿ ಒಮ್ಮತದಿಂದ ಇದ್ದೇವೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಮಾನ್ಯ ನಾಣಯ್ಯನವರು ಬಹಳ ಬಿಸಿ ಬಿಸಿಯಾಗಿ ಮಾತನಾಡುತ್ತಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಈ ಸಭೆಯಲ್ಲಿ ಎಳೆಎಳೆಯಾಗಿ ಹೇಳುತ್ತೇನೆ. ಆದ್ದರಿಂದ ವಾಟಾಳ್ ನಾಗರಾಜ್‌ರವರೇ, ನಿಮ್ಮ ವಿಚಾರಧಾರೆಗೂ ಅವರ ವಿಚಾರಧಾರೆಗೂ ಬೇಕಾದಷ್ಟು ಅಂತರ ವ್ಯತ್ಯಾಸವಿದೆ. ವಿರೋಧ ಪಕ್ಷದಲ್ಲಿ, ರಾಜಕೀಯವಾಗಿರತಕ್ಕಂಥ ಇಚ್ಛಾಶಕ್ತಿ ಇದೆ. ರಾಜ್ಯದ ಜನರ ಹಿತವೇ ಮುಖ್ಯ ಹೊರತು ನಿಮಗೆ ಕುರ್ಚಿ ಮುಖ್ಯ ಅಲ್ಲ.

ಆದರೆ ಬಾಕಿ ಇರತಕ್ಕಂಥ ವಿರೋಧ ಪಕ್ಷದವರಿಗೆ ಕೇವಲ ಕುರ್ಚಿ ಅಧಿಕಾರ ಮುಖ್ಯ. ಇನ್ನ್ಯಾವುದೂ ಅವರಿಗೆ ಮುಖ್ಯವಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಕೇಂದ್ರ ಸರ್ಕಾರದ ಕುರ್ಚಿಯನ್ನು ಉಳಿಸಿ ಕೊಳ್ಳುವುದಕ್ಕೆ ಇದು ಒಂದೇ ಒಂದು ತಂತ್ರ. ಇದರ ಬಗ್ಗೆ ಬೇರೆ ಮಾತೇ ಇಲ್ಲ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರಿಗೆ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಕುರ್ಚಿಗೆ ಆಸೆ ಇಲ್ಲದೇ ಹೋದಮೇಲೆ ಪುನಃ ತಂತ್ರಗಾರಿಕೆ ಮಾತು ಏಕೆ? ನಿಮಗೆ ಕುರ್ಚಿಗೆ ಅವಕಾಶ ಇರುವುದಿಲ್ಲ, ನಿಮಗೆ ತಂತ್ರಗಾರಿಕೆ ಇಲ್ಲ, ಆದ್ದರಿಂದ ನಿಮ್ಮೆಲ್ಲರನ್ನು ಕಳಕಳಿಯಿಂದ ಕೇಳಿಕೊಳ್ಳವುದೇನೆಂದರೆ ಈ ರಾಜ್ಯದ ಜನತೆಯ ಹಿತವನ್ನು ಕಾಪಾಡುವುದಕ್ಕೋಸ್ಕರ ನಾವು ನೀವೆಲ್ಲರೂ ಒಟ್ಟಾಗಿ ಸೇರಿ ನಡೆಯಬೇಕು.ನಾವು ಒಗ್ಗಟ್ಟಾಗಿ ನಮ್ಮ ಪ್ರದರ್ಶನವನ್ನು ಮಾಡಬೇಕು. ಯಾವುದೇ ಸಂದರ್ಭದಲ್ಲೂ ನಮಗೆ ಬಂದಿರತಕ್ಕಂಥ ನದಿ ನೀರಿನ ಹಕ್ಕನ್ನು ಬಳಸಲಿಕ್ಕೆ ಇರತಕ್ಕಂಥದ್ದಕ್ಕೆ ಯಾರಿಗೂ ತಡೆಯಲಿಕ್ಕೆ ಆಗುವುದಿಲ್ಲವೆಂದು ಹೇಳುವ ಒಗ್ಗಟ್ಟಿನ ಪ್ರದರ್ಶನವಾಗಬೇಕಾಗಿದೆ. ಈ ವಿಚಾರವನ್ನು ಇಷ್ಟಕ್ಕೆ ನಿಲ್ಲಿಸುತ್ತೇನೆ.• ಇನ್ನೂ ಆ 200 ಕೋಟಿ ರೂಪಾಯಿಗಳ ಬಗ್ಗೆ ಒಂದು ಮಾತನ್ನು ಹೇಳಿದರು. ಅದಕ್ಕೆ ತಾವೇ ಉತ್ತರವನ್ನು ಕೊಟಬಿಟ್ಟಿದ್ದೀರಿ. 900 ಕೋಟಿ ರೂಪಾಯಿಗಳನ್ನು ಮುಂಗಡ ಪತ್ರದಲ್ಲಿ ಇಟ್ಟಿದ್ದೇವೆಂದು ಪ್ರಧಾನಮಂತ್ರಿಗಳು ಹೇಳಿದ್ದಾರೆ. ಸುಮಾರು 6 ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಈ ಹಣವನ್ನು ಉಪಯೋಗ ಮಾಡಬೇಕೆಂದು ಹೇಳುತ್ತಿರತಕ್ಕಂಥ ಚಿಂತನೆ ಅವರ ಮನಸ್ಸಿನಲ್ಲಿ ಇದೆ. ಈ 900ಕೋಟಿ ರೂಪಾಯಿಗಳನ್ನು

ಯಾವ ರೀತಿ, ಯಾವ ಯಾವ ಯೋಜನೆಗಳಿಗೆ ಹಂಚಬೇಕೆಂದು ಹೇಳುತ್ತಿರತಕ್ಕಂಥ ದ್ದನ್ನು ಕೇಂದ್ರ ಸರ್ಕಾರ ಅವರ ಇಲಾಖೆಯಲ್ಲಿ ಅವರು ಕಾರ್ಯಕ್ರಮ ಕೈಗೊಳ್ಳುತ್ತಾರೆ. ಈ ಹಣವು ನಮಗೆ ಬಂದಾಗ ನಾವು ಅದನ್ನು ದೊಡ್ಡ ಮನಸ್ಸಿನಿಂದ ಮುಕ್ತ ಮನಸ್ಸಿನಿಂದ ಸ್ವೀಕಾರ ಮಾಡಿ ಅಭಿನಂದನೆಗಳನ್ನು ಸಲ್ಲಿಸಲಿಕ್ಕೆ ಇರತಕ್ಕಂಥ ಕ್ರಮವನ್ನು ಕೈಗೊಳ್ಳಬೇಕು. ದಯವಿಟ್ಟು ಎಲ್ಲದರಲ್ಲಿಯೂ ರಾಜಕಾರಣ ಮಾಡಬೇಡಿ. ರಾಜಕಾರಣ ಮಾಡಲಿಕ್ಕೆ ಬೇರೆ ವಿಚಾರಗಳನ್ನು ಆರಿಸಿಕೊಳ್ಳಬೇಕು. ರಾಜಕಾರಣ ಮಾಡಬೇಡಿ ಎಂದು ಹೇಳುತ್ತಿದ್ದೇನೆ. ಬಹಳ ವರ್ಷಗಳಿಂದ ರಾಜಕೀಯವಾಗಿ ಕರ್ನಾಟಕ ರಾಜ್ಯದಲ್ಲಿ ಅಧಿಕಾರಕ್ಕೆ ಬರಬೇಕೆಂದು ಹೇಳಿದವರಲ್ಲಿ ನಮ್ಮ ಹಿರಿಯ ಮಿತ್ರರಾಗಿರತಕ್ಕಂಥ ಶ್ರೀಮಾನ್ ಯಡಿಯೂರಪ್ಪನವರು ಒಬ್ಬರು. ನಾನು ಇಲ್ಲವೆಂದು ಹೇಳಲಿಕ್ಕೆ ತಯಾರಿಲ್ಲ. ರಾಜಕೀಯದಲ್ಲಿ ಅಧಿಕಾರಕ್ಕೆ ಬರಬೇಕೆನ್ನುವುದು ಅದು ಯಾರದ್ದೂ ಸಹ ತಪ್ಪು ಅಲ್ಲ. ನಿಜವಾಗಿಯೂ ಅದು ಅವರ ಹಕ್ಕು ಆಗಿರುತ್ತದೆ. ಅದಕ್ಕೋಸ್ಕರ ಹೋರಾಟ ಮಾಡಬೇಕಾಗುತ್ತದೆ. ಅವರು ಬಹಳ ಹೋರಾಟವನ್ನೇ ಮಾಡಿಕೊಂಡು ಬಂದಿದ್ದಾರೆ. ಇನ್ನೂ ಕೂಡ ಆ ಕುರ್ಚಿ ಬಹಳ ದೂರದಲ್ಲಿದೆ. ಆದರೆ ಕಾವೇರಿ ಮತ್ತು ಕೃಷ್ಣಾವನ್ನು ಬಳಸಿಕೊಂಡು ಕುರ್ಚಿ ಬಹಳ ಹತ್ತಿರಕ್ಕೆ ಬರುತ್ತದೆಂದು ಹೇಳಿ ನೀವು ಮನಸ್ಸಿನಲ್ಲಿ ನೆನೆಸಿಕೊಂಡರೆ ಅದು ಕೇವಲ ಕನಸಿನ ಒಂದು ಗಂಟು ಆಗುತ್ತದೆಂದು ಹೇಳುತ್ತೇನೆ. ಇಷ್ಟು ಮಾತ್ರ ಸದಸನದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಮಸ್ಕಾರ.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಈ ಕೃಷ್ಣಾ, ಕಾವೇರಿ ವಿಷಯದಲ್ಲಿ ವಿರೋಧ ಪಕ್ಷದವರ ಕಾಳಜಿಯನ್ನು ನೋಡಿದರೆ, ಅದೇ ಹಾಡು, ಅದೇ ರಾಗ, ಅದೇ ಕಥೆ ಏನು ನೀವು ಸಹ ಇದಕ್ಕೆ ಅವಕಾಶವನ್ನು ಕೊಡುತ್ತೀರಿ, ಬೇರೆ ಅವಕಾಶಗಳಿಗೆ ತೊಂದರೆಯಾಗುತ್ತಿದೆ. ನಮಗೆ ಕೇಳುವುದಕ್ಕೆ ತಾಳ್ಮೆನೇ ಇಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಯಾವ ಸಮಯದಲ್ಲಿ ಹೇಗೆ ಮಾತನಾಡಬೇಕು ಎನ್ನುವುದರಲ್ಲಿ ಬಹುಶಃ ತಾವು ಬಹಳಷ್ಟು ಪರಿಣಿತರು ಇದ್ದೀರಿ. ಒಂದು ಮಾತನ್ನು ಹೇಳುವುದಾದರೆ, ಕೃಷ್ಣ ಕಾವೇರಿ ನದಿ ನೀರಿನ ವಿಚಾರದಲ್ಲಿ ನಾವು ಹೇಗೆ ನಡೆದುಕೊಂಡು ಬಂದಿದ್ದೇವೆ ಎನ್ನುವುದನ್ನು ನೋಡಿದಾಗ ತಮ್ಮ ಆತ್ಮಸಾಕ್ಷಿಯಾಗಿ ಹೇಳಿ. ನಾವು ಎಂದೂ ಸಹ ನಾವು ರಾಜಕಾರಣವನ್ನು ಮಾಡುವುದಕ್ಕೆ ಹೋಗಲಿಲ್ಲ, ಸರ್ಕಾರ ಒಳ್ಳೆಯ ನಿಲುವನ್ನು ತೆಗೆದುಕೊಂಡಾಗ ನಾವುಗಳು ಸರ್ಕಾರದ ಜೊತೆಯಲ್ಲಿ ನಿಂತು ಬಂದಿದ್ದೇವೆ. ಈ ಕೃಷ್ಣಾ ಕಾವೇರಿ ವಿವಾದದಲ್ಲಿ ಜನಕ್ಕೆ ನ್ಯಾಯ ಸಿಗುವಂತಹ ಪ್ರಶ್ನೆ ಬಂದಾಗ, ಹೋರಾಟದ ಸಮಯ ಬಂದಾಗ ನನ್ನ ಕುರ್ಚಿ ಬಿಟ್ಟೇನು, ನನ್ನ ಸ್ಥಾನಮಾನಕ್ಕೆ ರಾಜೀನಾಮೆಯನ್ನು ಕೊಟ್ಟು ಹೋರಾಟಕ್ಕೆ ಇಳಿದೇನು, ಆದರೆ ರಾಜಕಾರಣವನ್ನು ಮಾಡಿ ಈ ರಾಜ್ಯದ ಜನತೆಗೆ ದ್ರೋಹವನ್ನು ಮಾಡುವಂತಹ ಕೆಲಸವನ್ನು ಮಾಡುವುದಿಲ್ಲ. ಎರಡನೆಯದಾಗಿ ನಿಮ್ಮ ಹಾಗೆ ಕುರ್ಚಿಗೆ ಬರಬೇಕು ಎಂಬ ಒಂದೇ ಒಂದು ಕಾರಣಕ್ಕೋಸ್ಕರವಾಗಿ ಬದುಕಿರುವವರೆಗೆ ನಾನು ವಿರೋಧಪಕ್ಷದ ಕುರ್ಚಿಯಲ್ಲಿ ಕುಳಿತುಕೊಳ್ಳಲು ಇಚ್ಛೆಯನ್ನು ಪಡುತ್ತೇನೆ ಹೊರತು ಹೇಗೋ ಒಂದು ವಾಮ ಮಾರ್ಗದಲ್ಲ ಆಡಳಿತ ಪಕ್ಷಕ್ಕೆ ಬಂದು ಈ ರೀತಿಯಾಗಿ ದೊಂಬರಾಟವನ್ನು ಮಾಡುವಂತಹ ರಾಜಕಾರಣ ನನ್ನ ಜೀವನದಲ್ಲಿ ಆ ರೀತಿಯ ದಿವಸಗಳು ಬರಬಾರದೆಂದು ನಾನು ಭಗವಂತನಲ್ಲಿ ಪ್ರಾರ್ಥನೆಯನ್ನು ಮಾಡುತ್ತೇನೆ.

ಇವೊತ್ತು ಎಲ್ಲಾ ಪಕ್ಷದ ಮುಖಂಡರುಗಳು ಇದ್ದಾರೆ ಅವರು ಒಬ್ಬರು ಇರಬಹುದು ಇಬ್ಬರು ಇರಬಹುದು, ನಾಲ್ಕು ಜನರು ಇರಬಹುದು ಇದುವರೆಗೆ ಕರ್ನಾಟಕ ಇತಿಹಾಸದಲ್ಲಿ ಕಾವೇರಿ, ಕೃಷ್ಣಾ ವಿವಾದ ಬಂದಾಗ, ಎಲ್ಲರನ್ನೂ ಒಟ್ಟಾಗಿ ಕರೆದು ಮಾತನಾಡುತ್ತಿದ್ದ, ಇಂದಿನ ಪ್ರಧಾನಿ ಇರಬಹುದು, ಅವರು ಒಟ್ಟಿಗೆ ಕರೆದು ಮಾತನಾಡುತ್ತಿದ್ದರು, ಇವತ್ತು ಕಾಂಗ್ರೆಸ್ ಮುಖಂಡರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ, ಬಿ.ಜೆ.ಪಿ.ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಾತ್ರ ಕರೆದು ಬೇರೆ ಪಕ್ಷದವರನ್ನು ಪಕ್ಕಕ್ಕೆ ಸರಿಸುವಂತಹ ಮೊದಲನೆಯ ಪ್ರಯತ್ನ. ನಮ್ಮಲ್ಲಿ ಒಂದು ರೀತಿ ಒಡೆದು ಆಳುವಂತಹ ನೀತಿ.

ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಯವರು ಆಂಧ್ರಕ್ಕೆ ಹೊರಟರು, ಆದರೆ ಆಂಧ್ರ ಪ್ರದೇಶದ ಮಾನ್ಯ ಮುಖ್ಯಮಂತ್ರಿಯವರು ವಿರೋಧ ಪಕ್ಷದ ನಾಯಕರುಗಳ ಸಭೆಯನ್ನು ಕರೆದಿದ್ದಾರೆ. ನೀವು ಅಲ್ಲಿಗೆ ಹೋಗುವುದಕ್ಕೆ ಮುಂಚೆ, ನಾವು ಪತ್ರಿಕೆಗಳನ್ನು ಓದಬೇಕಾ? ಯಾವ ಹಿನ್ನಲೆಯಲ್ಲಿ ನಾವು ಪ್ರಧಾನಿಯವರನ್ನು ಭೇಟಿ ಮಾಡಲು ಹೋಗುತ್ತಿದ್ದೇವೆ, ಅಲ್ಲಿ ಏನನ್ನು ಪ್ರತಿಪಾದನೆಯನ್ನು ಮಾಡಬೇಕೆಂದು ಇದ್ದೇವೆ. ಅವರು ಏನು ಹಿನ್ನಲೆಯನ್ನು ಇಟ್ಟುಕೊಂಡು ಕರೆದಾಗಿದ್ದಾರೆ ಅದನ್ನು ನಮಗೆ ವಿವರಿಸಿ, ನಮ್ಮ ನಿಲುವು ಏನು ಎಂಬುದನ್ನು ಸ್ಪಷ್ಟ ಮಾಡಿ ಪ್ರತಿ ಪಕ್ಷದ ಮುಂಖಡರುಗಳ್ನು ಇತರೆ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇಬ್ಬರು ಹೋಗೋಣ, ಮೂವರು ಹೋಗೋಣ, ಬೇರೆ ಯಾವುದೇ ಕಾರಣಕ್ಕೆ ಒಬ್ಬರೇ ಬೇಕಾದರೆ ನಮ್ಮೆಲ್ಲರ ಪ್ರತಿನಿಧಿಯಾಗಿ ಹೋಗಲಿ ನಾನು ಅದಕ್ಕೂ ಪ್ರತಿಪಾದನೆಯನ್ನು ಮಾಡುವುದಿಲ್ಲ.

ಇದು ಯಾವುದನ್ನೂ ಮಾಡದೇ ನಮ್ಮನ್ನು ಯಾರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ, ಸಭೆಯನ್ನು ಮಾಡದೇ, ಮಾಯ ಮುಖ್ಯಮಂತ್ರಿಗಳು 4 1/2 ಗಂಟೆಯಲ್ಲಿ ಒಂದು ಪತ್ರವನ್ನು ಬರೆಯುತ್ತಾರೆ. 6 1/2 ಗಂಟೆಯಲ್ಲಿ ನಮಗೆಲ್ಲಾ ಒಂದು ಟೆಲೆಕ್ಸ್ ಮೆಸೇಜ್ ಬಂದಿದೆ, ನಾವು ಎಲ್ಲಾ ಹೋಗುತ್ತಿದ್ದೇವೆ ಎಂದು ಬರೆದಿರುತ್ತಾರೆ. ಅಲ್ಲಿಗೆ ನಮ್ಮನ್ನು ಕರೆದುಕೊಂಡು ಹೋಗಿ ಅಲ್ಲಿ ಸಿಗಿಸುವಂತಹ ನಿಮ್ಮ ಪ್ರಯತ್ನ ಇದು ಕಾಜಕಾರಣನೋ ಅಥವಾ ನಮ್ಮದು ರಾಜಕಾರಣನೋ? ಯಾವ ಹಿನ್ನಲೆಯಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಸಭೆಯನ್ನು ಕರೆದಿರುವುದು ಎಲ್ಲಾ ಪತ್ರಿಕೆಗಳ ಮುಖ ಪುಟದಲ್ಲಿ ಬಂದಾಗ ಇವತ್ತು ಆಂಧ್ರುಪ್ರದೇಶದವರು ಧಮಕಿಯನ್ನು ಹಾಕಿರುವಂತಹ ಸಂದರ್ಭದಲ್ಲಿ, ಇವತ್ತು ಆಂಧ್ರಪ್ರದೇಶದ ಮಾನ್ಯ ಮುಖ್ಯಮಂತ್ರಿಗಳನ್ನು ಓಲೈಸುವುದಕ್ಕೋಸ್ಕರವಾಗಿ ಈ ಸಭೆಯನ್ನು ಕರೆದಿದ್ದಾರೆಂಬ ಭಾವನೆಯು ಬಂದಾಗ,

ಪ್ರತಿಪಕ್ಷದ ಮುಖಂಡನಾದ ನಾನು ಅಲ್ಲಿ ಹೋಗಿ ಕುಳಿತುಕೊಂಡಾಗ ಏನು ಪರಿಣಾಮ ಆಗಬಹುದು, ನಾಡಿನ ಜನರಿಗೆ ಕುರ್ಚಿಯ ಆಸೆಗಾಗಿ ನೀವು ದ್ರೋಹವನ್ನು ಮಾಡುವುಕ್ಕೆ ಸಿದ್ದರಿರಬಹುದು ಆದರೆ ಶ್ರೀ ಯಡಿಯೂರಪ್ಪ ದ್ರೋಹ ಮಾಡುವುದಕ್ಕೆ ಸಿದ್ದವಿಲ್ಲ. ಅದಕ್ಕಾಗಿ ನಾನು ಆ ಸಭೆಗೆ ಹೋಗಲಿಲ್ಲ. ಸಮಯ ಬಂದಾಗ ನಾನು ಪ್ರಧಾನಿಗಳ ಹತ್ತಿರ ಹೋಗುತ್ತೇನೆ, ಮಾತನಾಡುತ್ತೇವೆ, ಕನ್ವಿನ್ಸ್ ಮಾಡುತ್ತೇವೆ. ನಮ್ಮ ನಿಲುವಿನಲ್ಲಿ ಯಾವ ಬದಲಾವಣೆ ಇಲ್ಲ, ಕೇಂದ್ರ ಸರ್ಕಾರ ಕುರ್ಚಿಯ ಉಳಿವಿಗಾಗಿ ಈ ನಿಲುವಿನಲ್ಲಿ ಬದಲಾವಣೆಯಾದರೆ ಕರ್ನಾಟಕ ರಾಜ್ಯದಲ್ಲಿ ರಕ್ತ ಹರಿದೀತು, ಕ್ರಾಂತಿ ಯಾದೀತು ಎಂಬ ಎಚ್ಚರಿಕೆಯ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಯನ್ನು ಪಡುತ್ತೇನೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರುಗಳನ್ನು ಇವತ್ತು ಪ್ರಧಾನ ಮಂತ್ರಿಗಳ ಸಭೆಗೆ ಕರೆಯುವಾಗ, ಇವತ್ತು ತಾರತಮ್ಯವನ್ನು ಮಾಡಿದ್ದಾರೆ.

ಜನರು ನಮ್ಮನ್ನು ಏನು ತಿಳಿದುಕೊಳ್ಳುತ್ತಾರೆ, ನಮ್ಮ ಸದಸ್ಯರುಗಳ ಗತಿ ಏನಾಗಬೇಕು? ಮುಖ್ಯವಾದಂತಹ ವಿಷಯವನ್ನು ಪ್ರಸ್ತಾಪವನ್ನು ಮಾಡಬೇಕೆಂದು ತಾವು ಅವಕಾಶವನ್ನು ಕೇಳಿದ್ದೀರಿ, ನನ್ನ ಕರ್ತವ್ಯ ತಮ್ಮ ಜೊತೆಯಲ್ಲಿ ಸಹಕರಿಸಿಕೊಂಡು ಹೋಗಬೇಕು. ಈಗ ಈ ವಿಷಯದ ಬಗ್ಗೆ ಒಂದು ಗಂಟೆಗಳ ಕಾಲವಾಯಿತು. ಈಗ ಪ್ರಶ್ನೋತ್ತರದ ವೇಳೆಯ ಬದಲಾಗಿ, ಈ ವಿಷಯದ ಬಗ್ಗೆ ಚರ್ಚೆಯನ್ನು ಮಾಡಿ ಒಂದು ಗಂಟೆ ಕಳೆದು ಹೋಯಿತು. ಆ ಒಂದು ಗಂಟೆಯ ಉಳಿದಿದ್ದರೆ ಇನ್ನು 4 ಜನ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಕೊಡಬಹುದಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಿಮ್ಮ ಬಗ್ಗೆ ಬಹಳಷ್ಟು ಗೌರವ ಇದೆ. ನಾನಂತು ವಿರೋಧ ಪಕ್ಷಗಳ ಪರವಾಗಿ, ಬಹುಶಃ ಎಲ್ಲರೂ ಮೆಚ್ಚುವಂತಹ ರೀತಿಯಲ್ಲಿ ತಾವು ಸದನವನ್ನು ಅತ್ಯಂತ ಉತ್ತಮವಾಗಿ ನಡೆಸುತ್ತಿದ್ದೀರಿ, ಎಲ್ಲರಿಗೂ ಅವಕಾಶಗಳನ್ನು ಕೊಡುತ್ತಿದ್ದೀರಿ, ನಾನು ನಿಮಗೆ 100 ಬಾರಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ಸಹಕರಿಸಿದ್ದೀರಿ, ನಾನು ನಿಮ್ಮನ್ನು ಅಭಿನಂದಿಸುತ್ತಿದ್ದೇನೆ. ನನಗೆ ನಿಮ್ಮ ಬಗ್ಗೆ ಬಹಳ ಮೆಚ್ಚುಗೆ ಇದೆ, ಏಕೆಂದರೆ ನಿಮಗೆ ಜವಾಬ್ದಾರಿ ಇದೆ. 40 ಜನರ ಭಾವನೆಗಳನ್ನು ನೀವು ಸ್ಪಂದಿಸಬೇಕು. ನಾಯಕರಾಗಿ ಅವರೆಲ್ಲರಿಗೂ ನೀವು ಅವಕಾಶವನ್ನು ಕೊಡಬೇಕು, ಇಲ್ಲ ಎಂದರೆ, ನಿಮ್ಮ ಪಕ್ಷದ ಶಾಸಕಾಂಗ ಸಭೆಯಲ್ಲಿ ನೀವು ಅವರಿಗೆ ಉತ್ತರಿಸಬೇಕಾಗುತ್ತದೆ. ಆದರೆ ಬೇರೆಯವರಿಗೆ ಆ ಜವಾಬ್ದಾರಿ ಇಲ್ಲ. ಹಾಗಾಗಿ ಅವರು ಬೆಲ್ಲಾಟಕ್ಕೆ ಇಳಿಯುತ್ತಾರೆ. ಅದು ಆಗಬಾರದು ಎಂದು ನಾನು ಹೇಳುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು ಏನು ನಮಗೆ ಅವಕಾಶವನ್ನು ಕೊಡುತ್ತೀರಿ ಅದರ ಬಗ್ಗೆ ನಮ್ಮದು ಏನೂ ಅಭ್ಯಂತರವಿಲ್ಲ. ಆದರೆ ಅತ್ಯಂತ ಪ್ರಮುಖವಾದಂತಹ ವಿಷಯ ಮತ್ತೊಮ್ಮೆ ಗೊಂದಲಕ್ಕೆ ಎಡೆಮಾಡಿರುವುದರಿಂದ ಕಾವೇರಿ ಮತ್ತು ಕೃಷ್ಣಾ ವಿಷಯ ಪ್ರಸ್ತಾಪಿಸುವುದು ಅನಿವಾರ್ಯವಾಯಿತು. ನೀವೂ ಸಹ ವಿರೋಧ ಪಕ್ಷದಲ್ಲಿ ಕುಳಿತುಕೊಂಡಿದ್ದರೆ ಇದನ್ನೇ ಅನಿವಾರ್ಯವಾಗಿ ಮಾಡಬೇಕಾಗಿತ್ತು. ಅದಕ್ಕೆ ನಮ್ಮದು ಏನೂ ಅಭ್ಯಂತರವಿಲ್ಲ. ಆದರೆ ಅದಕ್ಕೆ ಇತಿ ಮಿತಿ ಇದೆ. ಅದನ್ನು ನಾನು ಒಪ್ಪುತ್ತೇನೆ.

(3) ವಿತ್ತೀಯ – ಕಾರ್ಯಕಲಾಪಗಳು

(ಅ) ಪೂರಕ ಅಂದಾಜುಗಳು, 1996-97 (ಮೊದಲನೇ ಕಂತು) ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ಭಾರತದ ಸಂವಿಧಾನದ 205ನೇ (1) ಅನುಚ್ಛೇದದ ಮೇರೆಗೆ, 1996-97ನೇ ಸಾಲಿಗೆ ಸಂಬಂಧಿಸಿದ ಪೂರಕ ಅಂದಾಜುಗಳನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, 1996-97ನೇ ಸಾಲಿನ ಪೂರಕ ಅಂದಾಜುಗಳ (ಪ್ರಥಮ ಕಂತು) ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಅಧ್ಯಕ್ಷರು :ನೀವು ದಿವಸ ಇದನ್ನೇ ಮಾಡಬೇಕು ಎನ್ನುತ್ತೀರೋ? ಕೃಷ್ಣಾ, ಕಾವೇರಿ ವಿಚಾರವನ್ನು ತೆಗೆದುಕೊಳ್ಳಬೇಕೇ? ಅಸೆಂಬ್ಲಿಯಲ್ಲಿ ಬೇರೆ ವ್ಯವಹಾರವನ್ನು ನಡೆಸುವುದು ಬೇಡವೇ? ಅದಕ್ಕಾಗಿ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಇವತ್ತು ವಿರೋಧ ಪಕ್ಷಗಳ ಬಗ್ಗೆ ತಾರತಮ್ಯವನ್ನು ವಹಿಸಿದ್ದಂತಹ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ನಾವುಗಳು ಸಭಾತ್ಯಾಗವನ್ನು ಮಾಡುತ್ತೇವೆ.

(ಈ ಹಂತದಲ್ಲಿ ಶ್ರೀಯುತರಾದ ಯು.ಆರ್. ಸಭಾಪತಿಯವರು ಸಭಾತ್ಯಾಗವನ್ನು ಮಾಡಿದರು)

2. ಶಾಸನಾ ರಚನಾ ಕಾರ್ಯಕಲಾಪಗಳು ವಿಧೇಯಕಗಳ ಮಂಡನೆ

(ಅ) ಕರ್ನಾಟಕ ಪಂಚಾಯತ್‌ರಾಜ್(ಎರಡನೇಯ ತಿದ್ದುಪಡಿ)ವಿಧೇಯಕ 1996, (ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 1996ರ ಕರ್ನಾಟಕ ಪಂಚಾಯತ್ ರಾಜ್ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, " 1996ರ ಕರ್ನಾಟಕ ಪಂಚಾಯತ್ ರಾಜ್ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿಯನ್ನು ನೀಡಲಾಯಿತು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 1996ರ ಕರ್ನಾಟಕ ಪಂಚಾಯತ್ ರಾಜ್ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರವನ್ನು ಬಲಿ ಕೊಡುತ್ತಿದ್ದಾರೆ, ಇದು ಒಳ್ಳೆಯ ನೀತಿಯಲ್ಲ, ಕೇಂದ್ರ ಸರ್ಕಾರವನ್ನು ಉಳಿಸುವುದಕ್ಕೆ, ಕರ್ನಾಟಕ ಸರ್ಕಾರದ ತಂತ್ರ ಇದು. ಕೇಂದ್ರ ಸರ್ಕಾರಕ್ಕೆ ಧಿಕ್ಕಾರವಿರಲಿ, ಆಂಧ್ರ ಪ್ರದೇಶದ ಸರ್ಕಾರಕ್ಕೆ ಧಿಕ್ಕಾರವಿರಲಿ, ಕರ್ನಾಟಕವನ್ನು ಕಡೆಗಣಿಸುತ್ತಿರುವಂತಹ ಸರ್ಕಾರಕ್ಕೆ ಧಿಕ್ಕಾರವಿರಲಿ, ಕೇಂದ್ರದಲ್ಲಿ ಕುರ್ಚಿಯನ್ನು ಉಳಿಸುವಂತಹ ತಂತ್ರವಿದು.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ಸಭಾತ್ಯಾಗವನ್ನು ಮಾಡಿದರು)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಏನು ಹೇಳುವುದೆಂದರೆ, ತಾವು ನನ್ನ ಜೊತೆಯಲ್ಲಿ ಸಹಕರಿಸಿದ್ದೀರಿ, ಕಾವೇರಿ, ಕೃಷ್ಣಾ ಇವು ನಮ್ಮ ಜೀವನದಿಗಳು ಈ ಸಾರಿ ಅಧಿವೇಶನ ಪ್ರಾರಂಭವಾದ ಮೇಲೆ ಒಂದಲ್ಲ ಒಂದು ರೂಪದಲ್ಲಿ ಇದನ್ನು ಬಿಟ್ಟು ಬೇರೆ ಯಾವುದೇ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳದೇ ಹೋದರೆ